2017 ಕ.ತೀ.ವ. 554

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

ದಿನೇಶ್ ಗೌಡ ಮತ್ತು ಇನ್ನೊಬ್ಬರು –ವಿರುದ್ಧ– ರಾಜ್ಯ ಸರ್ಕಾರ, ವೈಟ್‌ಫೀಲ್ಡ್ ಪೋಲೀಸ್ ಠಾಣೆಯ ಪೋಲೀಸ್ ಸಬ್–ಇನ್ಸ್‌ಪೆಕ್ಟರ್ ಮುಖಾಂತರ, ಬೆಂಗಳೂರು *

ದಂಡ ಪ್ರಕ್ರಿಯಾ ಸಂಹಿತೆ ಕಲಂ 438ರಡಿಯಲ್ಲಿ ಕ್ರಿಮಿನಲ್ ಅರ್ಜಿ

ಭಾರತ ದಂಡ ಸಂಹಿತೆ ಕಲಂ 506, 120B, 420, 376 ಹಾಗೂ 307.

ಉಚ್ಚ ನ್ಯಾಯಾಲಯದೊಂದಿಗೆ ಸಮವರ್ತಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸತ್ರ ನ್ಯಾಯಾಲಯದ ಮುಂದಿರುವ ಪರಿಹಾರವನ್ನು ನಿಶ್ಯೇಷಗೊಳಿಸಿಕೊಳ್ಳದೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 438ರಡಿಯಲ್ಲಿ ಸಲ್ಲಿಸಿರುವ ಅರ್ಜಿಯು ಊರ್ಜಿತವೇ ಎಂಬುದು ಸದರಿ ಅರ್ಜಿಯಲ್ಲಿ ಉದ್ಭವಿಸಿರುವ ಕಾನೂನಾತ್ಮಕ ಪ್ರಶ್ನೆ.

ಉಚ್ಚ ನ್ಯಾಯಾಲಯದೊಂದಿಗೆ ಸಮವರ್ತಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸತ್ರ ನ್ಯಾಯಾಲಯದ ಮುಂದಿರುವ ಪರಿಹಾರವನ್ನು ನಿಶ್ಯೇಷಗೊಳಿಸಿಕೊಳ್ಳದ ದಂಡ ಪ್ರಕ್ರಿಯಾ ಸಂಹಿತೆ ಕಲಂ 438ರಡಿಯಲ್ಲಿ ಉಚ್ಚ ನ್ಯಾಯಾಲಯದ ಮುಂದೆ ಸಲ್ಲಿಸಿದ ಅರ್ಜಿಯು ಊರ್ಜಿತವಲ್ಲ. ಆದಾಗ್ಯೂ, ಸಂಬಂಧವಿಲ್ಲದ ಅಥವಾ ವಿಶೇಷ ಕಾರಣಗಳಿಗೆ ಉಚ್ಚ ನ್ಯಾಯಾಲಯವು ಪರಿಹಾರವನ್ನು ನೀಡುವ ಅಧಿಕಾರವನ್ನು ಹೊಂದಿರುತ್ತದೆಂದು ಅಭಿಪ್ರಾಯಪಟ್ಟು ಸದರಿ ಅರ್ಜಿಯನ್ನು ಪುರಸ್ಕರಿಸಿದೆ.

* ಕ್ರಿಮಿನಲ್ ಅರ್ಜಿ ಸಂಖ್ಯೆ: 3060/2016, ದಿನಾಂಕ: 20ನೇ ಜುಲೈ, 2016.

| ***ಉಲ್ಲೇಖಿಸಲಾದ ಮೊಕದ್ದಮೆಗಳು:*** | ***ಪ್ಯಾರಾಗಳಲ್ಲಿ*** |
|---|---|
| *1. ಐಎಲ್‌ಆರ್ 2002 ಕೆಎಆರ್ 3308<br>ಎನ್.ಬಿ. ಬುಂಗಾರಕೊಪ್ಪ -ವಿರುದ್ಧ-<br>ಕರ್ನಾಟಕ ರಾಜ್ಯ ಸರ್ಕಾರ* | *(ಉಲ್ಲೇ) 9* |
| *2. 1993 ಕ್ರಿ. ಎಲ್‌ಜೆ 3508<br>ವೈ. ಚಂದ್ರಶೇಖರ ರಾವ್ -ವಿರುದ್ಧ-<br>ವೈ.ವಿ. ಕಮಲ ಕುಮಾರ್* | *(ಉಲ್ಲೇ) 9(ಬಿ)* |
| *3. 1991 (2) ಸ್ಕೇಲ್ 150 ಮತ್ತು 170<br>ಕೆ. ವೀರಸ್ವಾಮಿ -ವಿರುದ್ಧ- ಭಾರತ ಸರ್ಕಾರ* | *(ಉಲ್ಲೇ) 9(ಬಿ)* |
| *4. ಎಐಆರ್ 1980 ಎಸ್‌ಸಿ 1632<br>ಗುರುಭಕ್ಷ್ ಸಿಂಗ್ ಸಿಬ್ಬಿಯಾ -ವಿರುದ್ಧ-<br>ಪಂಜಾಬ್ ರಾಜ್ಯ ಸರ್ಕಾರ ಮತ್ತು ಸರಬ್ಜಿತ್ ಸಿಂಗ್<br>ಮತ್ತು ಇನ್ನೊಬ್ಬರು -ವಿರುದ್ಧ-<br>ಪಂಜಾಬ್ ರಾಜ್ಯ ಸರ್ಕಾರ* | *(ಉಲ್ಲೇ) 9(ಸಿ)* |
| *5. (2007) 6 ಎಸ್‌ಸಿಸಿ 156<br>ಸಿಬಿಐ -ವಿರುದ್ಧ- ಗುಜರಾತ್ ರಾಜ್ಯ ಸರ್ಕಾರ* | *(ಉಲ್ಲೇ) 9(ಡಿ)* |
| *6. ಕ್ರಿಮಿನಲ್ ಅರ್ಜಿ ಸಂಖ್ಯೆ 4258/2012<br>ದಿನಾಂಕ 01.03.2013<br>ಶ್ರೀ ಸಿ.ಪಿ. ಯೋಗೇಶ್ವರ ಮತ್ತು ಇತರರು<br>-ವಿರುದ್ಧ- ಗಂಭೀರ ವಂಚನೆ ತನಿಖಾ ಕಚೇರಿ* | *(ಉಲ್ಲೇ) 12* |
| *7. 1983(2) ಕೆಎಲ್‌ಜೆ 8<br>ಅಯ್ಯ -ವಿರುದ್ಧ- ಕರ್ನಾಟಕ ರಾಜ್ಯ ಸರ್ಕಾರ* | *(ಉಲ್ಲೇ) 12(ಎ)* |
| *8. ಐಎಲ್‌ಆರ್ 2001 ಕೆಎಆರ್ 4080<br>ಶ್ರೀಮತಿ ಸಾವಿತ್ರಿ ಸ್ಯಾಮ್ಸನ್ -ವಿರುದ್ಧ-<br>ಕರ್ನಾಟಕ ರಾಜ್ಯ ಸರ್ಕಾರ* | *(ಉಲ್ಲೇ) 12(ಬಿ)* |

*9. 2002 ಕ್ರಿ. ಎಲ್‌ಜೆ 1998*
*ಶಿವಸುಬ್ರಹ್ಮಣ್ಯಂ –ವಿರುದ್ಧ–*
*ಕರ್ನಾಟಕ ರಾಜ್ಯ ಸರ್ಕಾರ ಮತ್ತು ಇನ್ನೊಬ್ಬರು (ಉಲ್ಲೇ) 12(ಸಿ)*

*10. ಐಎಲ್‌ಆರ್ 1989 ಕೆಎಆರ್ 2882*
*ಚಂದ್ರ ಈರಪ್ಪ –ವಿರುದ್ಧ–*
*ಕರ್ನಾಟಕ ರಾಜ್ಯ ಸರ್ಕಾರ (ಉಲ್ಲೇ) 12(ಡಿ)*

*11. ಬಿಎ ಸಂ.3024/2014*
*ಶ್ರೀ ಕ್ವಂತ ಗ್ವರ ಬ್ರಹ್ಮ –ವಿರುದ್ಧ–*
*ಅಸ್ಸಾಂ ರಾಜ್ಯ ಸರ್ಕಾರ (ಉಲ್ಲೇ) 14*

ಅರ್ಜಿದಾರರ ಪರ : ಶ್ರೀ ಪಿ.ಪಿ. ಹೆಗಡೆ, ನ್ಯಾಯವಾದಿ.
ಎದುರುದಾರರ ಪರ : ಶ್ರೀ ಚೇತನ್ ದೇಸಾಯಿ, ಹೆಚ್‌ಸಿಜಿಪಿ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ :**

ಅರ್ಜಿದಾರರು ನೇರವಾಗಿ, ಭಾರತ ದಂಡ ಸಂಹಿತೆಯ (ಐಪಿಸಿ) 506, 120–ಬಿ, 420, 376 ಮತ್ತು 307ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಕ್ಕಾಗಿ ಎದುರುದಾರ – ಪೊಲೀಸರ ಮುಂದಿನ ಕ್ರೈಂ. ಸಂ.302/2015ರ ಸಂಬಂಧದಲ್ಲಿ ನಿರೀಕ್ಷಣಾ ಜಾಮೀನು ಮಂಜೂರು ಮಾಡುವಂತೆ ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿ ಈ ನ್ಯಾಯಾಲಯದ ಮುಂದೆ ಬಂದಿದ್ದಾರೆ. ತರುವಾಯ, ಮೇಲ್ಕಂಡ ಸದರಿ ಅಪರಾಧಗಳಿಗಾಗಿ ದೋಷಾರೋಪ ಪಟ್ಟಿಯನ್ನು ದಾಖಲಿಸಿದ ನಂತರ ಸಿಸಿ ಸಂ.3254/2016ರಲ್ಲಿ ಅದನ್ನು ಮುಕ್ತಾಯಗೊಳಿಸಲಾಗಿದೆ.

2. ಅರ್ಜಿದಾರರಾದ ದಿನೇಶ್‌ಗೌಡ ಮತ್ತು ಶ್ರೀನಿವಾಸಗೌಡ ಅವರು ಮೇಲ್ಕಂಡ ಸದರಿ ಅಪರಾಧ/ಮೊಕದ್ದಮೆಯಲ್ಲಿ ಎ2 ಮತ್ತು ಎ3 ಎಂಬುದಾಗಿ ಕಾಣಿಸಿಕೊಂಡಿದ್ದಾರೆ. ಎ1 ಈಗಾಗಲೇ ಈ ನ್ಯಾಯಾಲಯದಿಂದ ಕ್ರಿಮಿನಲ್ ಅರ್ಜಿ ಸಂ.1144/2016ರಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 439ನೇ ಪ್ರಕರಣದ ಮೇರೆಗೆ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾನೆ.

3. ಈ ಮೊಕದ್ದಮೆಯ ಸಂಗತಿಗಳ ಸರಮಾಲೆಯ ಕಡೆಗೆ ಲಕ್ಷ್ಯ ವಹಿಸುವ ಮುನ್ನ ಮತ್ತು ಅರ್ಜಿದಾರರು ನಿರೀಕ್ಷಣಾ ಜಾಮೀನು ಪಡೆಯುವುದಕ್ಕೆ ಹಕ್ಕುಳ್ಳವರೇ ಅಥವಾ ಅಲ್ಲವೇ ಎಂಬ ಬಗ್ಗೆ ಖಾತ್ರಿ ಪಡಿಸಿಕೊಳ್ಳುವ ಮುಂಚೆ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರೀ ವಕೀಲರು, ಅಧಿಕಾರ ವ್ಯಾಪ್ತಿಯುಳ್ಳ ಸತ್ರ ನ್ಯಾಯಾಲಯದ ಮುಂದಿನ ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಮೇರೆಗಿನ ಪರಿಹಾರವನ್ನು ನಿಶ್ಶೇಷಗೊಳಿಸಿಕೊಳ್ಳದೆ ಅರ್ಜಿದಾರರು ಈ ನ್ಯಾಯಾಲಯದ ಮುಂದೆ ನೇರವಾಗಿ ಬಂದಿದ್ದಾರೆ. ಆದ್ದರಿಂದ ಅರ್ಜಿಯು ಸಮರ್ಥನೀಯವಲ್ಲದ್ದಾಗಿದೆ ಮತ್ತು ಅರ್ಜಿದಾರರನ್ನು ಮೊದಲು ಸತ್ರ ನ್ಯಾಯಾಲಯಕ್ಕೆ ಕಳುಹಿಸಬೇಕು, ಆನಂತರ ಅವರು ಈ ನ್ಯಾಯಾಲಯದ ಮುಂದೆ ಬರಬಹುದು ಎಂಬುದಾಗಿ ಗಂಭೀರವಾದ ಕಾನೂನಾತ್ಮಕ ಪ್ರಶ್ನೆಯನ್ನು ಎತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಈ ನ್ಯಾಯಾಲಯದ ಪರಿಗಣನೆಗಾಗಿ ಉದ್ಭವವಾಗುವ ಕಾನೂನಾತ್ಮಕ ಪ್ರಶ್ನೆಯು ಈ ಕೆಳಕಂಡಂತಿದೆ:

> *“ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿನ ಅರ್ಜಿಯು, ಉಚ್ಚ ನ್ಯಾಯಾಲಯಕ್ಕಿರುವ ಅಧಿಕಾರ ವ್ಯಾಪ್ತಿಗೆ ಸಮವರ್ತಿಯಾದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸತ್ರ ನ್ಯಾಯಾಲಯದ ಮುಂದಿನ ಸದರಿ ಉಪಬಂಧದ ಮೇರೆಗಿನ ಪರಿಹಾರವು ನಿಶ್ಶೇಷಗೊಳ್ಳದೆ, ಉಚ್ಚ ನ್ಯಾಯಾಲಯದ ಮುಂದೆ ಸಮರ್ಥನೀಯವಾಗುತ್ತದೆಯೇ?”*

ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣವು ಈ ಕೆಳಕಂಡಂತಿದೆ:

*"**438. ದಸ್ತಗಿರಿಯ ಶಂಕೆಯಿರುವ ವ್ಯಕ್ತಿಗೆ ಜಾಮೀನು ಮಂಜೂರು ಮಾಡಲು ನಿರ್ದೇಶನ:**– (1) ಯಾರೇ ವ್ಯಕ್ತಿಯು ತಾನು ಜಾಮೀನು ರಹಿತ ಅಪರಾಧವನ್ನು ಮಾಡಿರುವ ಆಪಾದನೆಯ ಮೇಲೆ ದಸ್ತಗಿರಿಯಾಗಬಹುದೆಂದು ನಂಬಲು ಕಾರಣವನ್ನು ಹೊಂದಿದ್ದರೆ, ಅಂಥ ದಸ್ತಗಿರಿಯನ್ನು ಮಾಡಿದ ಸಂದರ್ಭದಲ್ಲಿ ಆತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದೆಂದು ನಿರ್ದೇಶಿಸುವಂತೆ ಕೋರಿ ಆತನು ಉಚ್ಚ ನ್ಯಾಯಾಲಯ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಮನವಿ ಸಲ್ಲಿಸಬಹುದು; ಮತ್ತು ನ್ಯಾಯಾಲಯವು, ಇತರ ವಿಷಯಗಳ ಜೊತೆಗೆ ಈ ಕೆಳಕಂಡ ಸಂಗತಿಗಳನ್ನು, ಎಂದರೆ,–*

*(i) ಆಪಾದನೆಯ ಸ್ವರೂಪ ಮತ್ತು ತೀವ್ರತೆ;*

*(ii) ಈ ಮೊದಲು ಯಾವುದೇ ಸಂಜ್ಞೇಯ ಅಪರಾಧಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯವು ಅಪರಾಧ ನಿರ್ಣಯ ಮಾಡಿದ ಮೇಲೆ ಅರ್ಜಿದಾರನು ಕಾರಾವಾಸ ಶಿಕ್ಷೆಗೆ ಒಳಗಾಗಿದ್ದನೇ ಎಂಬ ಸಂಗತಿಯೂ ಸೇರಿದಂತೆ ಅರ್ಜಿದಾರನ ಪೂರ್ವ ಚರಿತ್ರೆ;*

*(iii) ಅರ್ಜಿದಾರನು ನ್ಯಾಯದಿಂದ ವಂಚಿತನಾಗುವ ಸಾಧ್ಯತೆ; ಮತ್ತು*

*(iv) ಅರ್ಜಿದಾರನನ್ನು ಹಾಗೆ ದಸ್ತಗಿರಿ ಮಾಡಿ ಅವನನ್ನು ನೋಯಿಸುವ ಅಥವಾ ಹಿಂಸಿಸುವ ಉದ್ದೇಶದಿಂದ ಆಪಾದನೆಯನ್ನು ಹೊರಿಸಿರುವ ಸಂದರ್ಭ.*

– *ಇಂತಹ ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಂಡ ನಂತರ, ಆ ಕೂಡಲೇ ಅರ್ಜಿಯನ್ನು ತಿರಸ್ಕರಿಸಬಹುದು ಅಥವಾ ನಿರೀಕ್ಷಣಾ ಜಾಮೀನು ನೀಡಿಕೆಗಾಗಿ ಮಧ್ಯಂತರ ಆದೇಶವನ್ನು ಹೊರಡಿಸಬಹುದು.*

ಉದ್ಭವಿಸಿರುವ ಪ್ರಶ್ನೆಯನ್ನು ಪರಿಗಣಿಸುವ ಉದ್ದೇಶಕ್ಕೆ ಉಳಿದ ಉಪಬಂಧಗಳ ಅಗತ್ಯವಿಲ್ಲ.

4. ಮೇಲ್ಕಂಡ ಸದರಿ ಉಪಬಂಧವನ್ನು ಸಹಜವಾಗಿ ಹಾಗೂ ಅರ್ಥವತ್ತಾಗಿ ಓದಿದಾಗ, ಅದು ಉಚ್ಚ ನ್ಯಾಯಾಲಯ ಹಾಗೂ ಸೆಷನ್ಸ್ ನ್ಯಾಯಾಲಯಕ್ಕೆ ಸಮವರ್ತಿಯಾದ ಅಧಿಕಾರ ವ್ಯಾಪ್ತಿಯನ್ನು ಪ್ರದತ್ತಗೊಳಿಸಿರುವುದು ಸುಸ್ಪಷ್ಟವಾಗಿ ತಿಳಿದುಬರುತ್ತದೆ. ನ್ಯಾಯಾಲಯದ ಮೊರೆ ಹೋಗುವಂತಹ ವ್ಯಕ್ತಿಯನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆಗೊಳಿಸುವ ವಿಸ್ತೃತ ವಿವೇಚನಾಧಿಕಾರವನ್ನು ಸೆಷನ್ಸ್ ನ್ಯಾಯಾಲಯಕ್ಕೆ ಮತ್ತು ಉಚ್ಚ ನ್ಯಾಯಾಲಯಕ್ಕೆ ನೀಡಲಾಗಿದೆ. ಸದರಿ ಉಪಬಂಧದಲ್ಲಿರುವ ಸಂಬಂಧಪಟ್ಟ ಮಾರ್ಗಸೂಚಿಗಳನ್ನು ಪರಿಗಣಿಸಿ, ನಿರೀಕ್ಷಣಾ ಜಾಮೀನಿನ ಮೇಲೆ ಅರ್ಜಿದಾರನನ್ನು ಬಿಡುಗಡೆಗೊಳಿಸುವ ಅಧಿಕಾರವ್ಯಾಪ್ತಿಯನ್ನು ಎರಡೂ ನ್ಯಾಯಾಲಯಗಳು ಪಡೆದಿವೆ.

5. ಉಪಬಂಧದಿಂದಲೇ ಕಂಡು ಬರುವಂತೆ, ಉಚ್ಚ ನ್ಯಾಯಾಲಯದ ಮುಂದೆ ಹೋಗುವ ವ್ಯಕ್ತಿಯು ಮೊದಲು ಸೆಷನ್ಸ್ ನ್ಯಾಯಾಲಯದ ಮುಂದಿನ ಸದರಿ ಪರಿಹಾರವನ್ನು ನಿಶ್ಶೇಷಗೊಳಿಸಿಕೊಳ್ಳಬೇಕು ಎಂದು ಉಪಬಂಧದ ಅಡಿಯಲ್ಲಿ ನಿಗಮಿತವಾದ ಯಾವುದೇ ಪ್ರತಿಬಂಧವಾಗಲಿ ಅಥವಾ ಯಾವುದೇ ಅಧ್ಯಾರೋಹವಾಗಲಿ ಅಥವಾ ಯಾವುದೇ ಪರಿಸ್ಥಿತಿಯಾಗಲಿ ಇಲ್ಲ. ವಾಸ್ತವವಾಗಿ, ಉಪಬಂಧದ ಅಡಿಯಲ್ಲಿ ಕಾಲಾನುಕ್ರಮವಾಗಿ, ಉಚ್ಚ ನ್ಯಾಯಾಲಯವನ್ನು ಮೊದಲು ಉಲ್ಲೇಖಿಸಿ, ತದನಂತರ ಸೆಷನ್ಸ್ ನ್ಯಾಯಾಲಯವನ್ನು ಉಲ್ಲೇಖಿಸಲಾಗಿದೆ.

6. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಯು ಈ ಸಂಬಂಧ ವಾದಿಸುತ್ತಾ, ಪರಿಹಾರವನ್ನು ನಿಶ್ಯೇಷಗೊಳಿಸಿಕೊಳ್ಳಲು ಸೆಷನ್ಸ್ ನ್ಯಾಯಾಲಯದ ಮುಂದೆ ಹೋಗುವ ಸಂಬಂಧ ಉಪಬಂಧದ ಅಡಿಯಲ್ಲಿಯೇ ಪ್ರಸ್ತಾಪವಿಲ್ಲದಿರುವಾಗ ಹಾಗೆ ಹೋಗುವಂತೆ ಈ ನ್ಯಾಯಾಲಯವು ಪಕ್ಷಕಾರನಿಗೆ ನಿರ್ದೇಶಿಸಲಾಗದು ಎಂದು ವಾದಿಸಿದ್ದಾರೆ. ಉಚ್ಚ ನ್ಯಾಯಾಲಯದ ಸಮವರ್ತಿ ಅಧಿಕಾರ ವ್ಯಾಪ್ತಿಯ ಮೊರೆ ಹೋಗಲು ಆತನಿಗೆ ಯಾವುದೇ ವಿಶೇಷ ಪರಿಸ್ಥಿತಿಗಳ ಸಮರ್ಥನೆಯನ್ನು ನೀಡುವ ಅಗತ್ಯವಿಲ್ಲವೆಂದು ವಾದಿಸಿದ್ದಾರೆ. ಈ ಸಂಬಂಧ ಅವರು ಹಲವಾರು ತೀರ್ಪುಗಳನ್ನು ಆಧಾರವಾಗಿಟ್ಟುಕೊಂಡಿದ್ದಾರೆ.

7. ಅದಕ್ಕೆ ಪ್ರತಿಯಾಗಿ, ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರೀ ನ್ಯಾಯವಾದಿಯೂ ಕೂಡ ಹಲವಾರು ತೀರ್ಪುಗಳನ್ನು ಆಧಾರವಾಗಿಟ್ಟುಕೊಂಡಿದ್ದು, ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿ ಉಚ್ಚ ನ್ಯಾಯಾಲಯವು ಸಮವರ್ತಿ ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದರೂ, ಆಚರಣೆಯ ವಿಷಯದ ಸಂಬಂಧವಾಗಿ ಪಕ್ಷಕಾರನು ತನ್ನ ಪರಿಹಾರಕ್ಕಾಗಿ ಮೊದಲು ಸೆಷನ್ಸ್ ನ್ಯಾಯಾಲಯದ ಮೊರೆ ಹೋಗಬೇಕು. ಆ ನಂತರ ಆ ಪರಿಹಾರವನ್ನು ನಿಶ್ಯೇಷಗೊಳಿಸಿಕೊಂಡ ಮೇಲೆ ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿ ಉಚ್ಚ ನ್ಯಾಯಾಲಯದ ಮೊರೆ ಹೋಗಬೇಕೆಂದು ವಾದಿಸಿದ್ದಾರೆ. ಪಕ್ಷಕಾರನು ನೇರವಾಗಿ ಉಚ್ಚ ನ್ಯಾಯಾಲಯಕ್ಕೆ ಮೊರೆ ಹೋದರೆ, ಆಗ ಆತನು ಸೆಷನ್ಸ್ ನ್ಯಾಯಾಲಯವನ್ನು ತಪ್ಪಿಸಿ ಬರಲು ಯಾಕೆ ಇಚ್ಛಿಸಿದನು ಎಂಬ ಬಗ್ಗೆ ಅಸಾಮಾನ್ಯವಾದ ಅಥವಾ ವಿಶೇಷ ಕಾರಣವನ್ನು ಸಮರ್ಥಿಸಿಕೊಳ್ಳಬೇಕೆಂಬುದು ಅವರ ಮುಂದುವರಿದ ವಾದವಾಗಿದೆ.

8. ಈ ಹಿನ್ನೆಲೆಯಲ್ಲಿ, ಈಗ ಪಕ್ಷಕಾರರು ಆಧಾರವಾಗಿಟ್ಟುಕೊಂಡ ವಿವಿಧ ತೀರ್ಪುಗಳನ್ನು ಪರಿಶೀಲಿಸೋಣ.

9. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಯು, ***ಎನ್.ಬಿ. ಬುಂಗಾರಕೊಪ್ಪ -ವಿರುದ್ಧ- ಕರ್ನಾಟಕ ರಾಜ್ಯ ಸರ್ಕಾರ*** [1] ಮೊಕದ್ದಮೆಯ ತೀರ್ಪನ್ನು ಆಧಾರವಾಗಿಟ್ಟುಕೊಂಡಿದ್ದು, ಅದರಲ್ಲಿ ಈ ನ್ಯಾಯಾಲಯವು, ವಿಶೇಷವಾಗಿ ಕೆಲವು ನಿರ್ದಿಷ್ಟ ಸನ್ನಿವೇಶಗಳಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದಡಿಯಲ್ಲಿನ ಅಧಿಕಾರಗಳು ಉಚ್ಚ ನ್ಯಾಯಾಲಯಕ್ಕೆ ಸೀಮಿತವಾಗಿರಬೇಕು ಎಂಬ ಮಾನ್ಯ ಏಕ ಸದಸ್ಯ ಪೀಠದ ನಿರ್ಣಯವನ್ನು ಒಪ್ಪದೆ, ವಿಭಾಗೀಯ ಪೀಠವು, ನಿರೀಕ್ಷಣಾ ಜಾಮೀನಿನ ಸಂದರ್ಭಗಳಲ್ಲಿ, ಅತ್ಯಂತ ನಿಕಟವರ್ತಿಯಾದ ನ್ಯಾಯಿಕ ಪ್ರಾಧಿಕಾರದಿಂದ ಎಂದರೆ ಸೆಷನ್ಸ್ ನ್ಯಾಯಾಲಯದಿಂದ ಪರಿಹಾರವನ್ನು ತುರ್ತಾಗಿ ಪಡೆದುಕೊಳ್ಳಬೇಕಾಗಿದ್ದು, ಅರ್ಜಿದಾರರು ಉಚ್ಚ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತಾರೆಯೇ ಎಂದು ನೋಡುವುದಲ್ಲವೆಂದು ಅಭಿಪ್ರಾಯಪಟ್ಟಿದೆ. ಸೆಷನ್ಸ್ ನ್ಯಾಯಾಲಯದ ಮುಂದೆ ಅಂಥ ಒಂದು ಅರ್ಜಿಯನ್ನು ಸಲ್ಲಿಸಿದಾಗ, ನ್ಯಾಯಾಲಯವು ಆ ಬಗ್ಗೆ ಕಾಳಜಿ ವಹಿಸಿದೆ ಎಂಬುದನ್ನು ತಮ್ಮ ನ್ಯಾಯಾಲಯವು ತುಂಬಾ ಜಾಗರೂಕತೆಯಿಂದ ತನ್ನ ವಿವೇಚನೆಯನ್ನು ಬಳಸಿದೆ ಮತ್ತು ತಾನೊಂದು ಜವಾಬ್ದಾರಿಯುತ ನ್ಯಾಯಾಲಯವೆಂಬ ಸಂಗತಿಯನ್ನು ನ್ಯಾಯಯುತವಾಗಿ ಮನಗಂಡಿದೆಯೆಂಬುದನ್ನು ನೈಜ ಪರಿಹಾರವು ಖಾತ್ರಿಪಡಿಸಬೇಕಾಗುತ್ತದೆಂದು ಅಭಿಪ್ರಾಯಪಟ್ಟಿದೆ.

9(ಎ) ಮೇಲ್ಕಂಡ ಸದರಿ ತೀರ್ಪಿನಲ್ಲಿ, ಈ ನ್ಯಾಯಾಲಯದ ಮುಂದೆ ಎತ್ತಲಾಗಿರುವ ಪ್ರಶ್ನೆಯನ್ನು ಪರಿಗಣಿಸಿರುವುದಿಲ್ಲ. ಆದರೆ, ಅದು ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿ ಪಕ್ಷಕಾರನು ತನ್ನ ಪರಿಹಾರಗಳಿಗಾಗಿ ಸೆಷನ್ಸ್ ನ್ಯಾಯಾಲಯದ ಮೊರೆ ಹೋಗಬಹುದು ಎಂದಷ್ಟೇ ಹೇಳಿದೆ.

9(ಬಿ) ***ವೈ. ಚಂದ್ರಶೇಖರ ರಾವ್ -ವಿರುದ್ಧ- ವೈ.ವಿ. ಕಮಲ ಕುಮಾರ್*** [2] ಮೊಕದ್ದಮೆಯಲ್ಲಿನ ಆಂಧ್ರಪ್ರದೇಶ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ

1. ಐಎಲ್‌ಆರ್ 2002 ಕೆಎಆರ್ 3308 2. 1993 ಕ್ರಿ. ಎಲ್‌ಜೆ 3508

ಮತ್ತೊಂದು ತೀರ್ಪಿನಲ್ಲಿ, ಈ ಮೊಕದ್ದಮೆಯಲ್ಲಿ ಎತ್ತಿದ ಸಂವಾದಿ ಪ್ರಶ್ನೆಯನ್ನೇ ಆ ನ್ಯಾಯಾಲಯವು ಉತ್ತರಿಸಿದೆ. ಸದರಿ ನ್ಯಾಯಾಲಯವು, ***ಕೆ. ವೀರಸ್ವಾಮಿ –ವಿರುದ್ಧ– ಭಾರತ ಸರ್ಕಾರ*** [3] ಮೊಕದ್ದಮೆಯಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಆಧಾರವಾಗಿಟ್ಟುಕೊಂಡು, ಉಚ್ಚ ನ್ಯಾಯಾಲಯ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಸಮವರ್ತಿ ಅಧಿಕಾರ ವ್ಯಾಪ್ತಿಯನ್ನು ಪ್ರಧಾನ ಮಾಡುವ ಉಪಬಂಧದ ವ್ಯಕ್ತ ಭಾಷೆಯು ಕಂಡು ಬರುತ್ತಿರುವ ಹಿನ್ನೆಲೆಯಲ್ಲಿ, ಪಕ್ಷಕಾರನು ಪ್ರಾರಂಭದಲ್ಲಿಯೇ ಸೆಷನ್ಸ್ ನ್ಯಾಯಾಲಯಕ್ಕೆ ಹೋಗಿಲ್ಲ ಎಂಬ ಆಧಾರದ ಮೇಲೆ ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿನ ಅರ್ಜಿಯನ್ನು ಪುರಸ್ಕರಿಸಲು ನಿರಾಕರಿಸುವ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು ನಮಗೆ ಕಂಡು ಬರುತ್ತಿಲ್ಲವೆಂದು ನಿರ್ಣಯಿಸಿದೆ. ಪಕ್ಷಕಾರನು ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣವನ್ನು ಅನ್ವಯಿಸಿಕೊಳ್ಳಬಹುದಾಗಿದ್ದು, ತಾನು ಸೆಷನ್ಸ್ ನ್ಯಾಯಾಲಯದ ಮುಂದೆ ಹೋಗಬೇಕೇ ಅಥವಾ ಉಚ್ಚ ನ್ಯಾಯಾಲಯದ ಮುಂದೆ ಹೋಗಬೇಕೇ ಎಂಬುದು ಆತನಿಗೆ ಬಿಟ್ಟ ಆಯ್ಕೆಯಾಗಿರುತ್ತದೆಂದು ಆಂಧ್ರಪ್ರದೇಶ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ನಿರ್ಣಯಿಸಿದೆ. ಆತನು ಉಚ್ಚ ನ್ಯಾಯಾಲಯದ ಮೊರೆ ಹೋದರೆ, ಉಚ್ಚ ನ್ಯಾಯಾಲಯವು ಅದರ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದಕ್ಕೆ ಅಗತ್ಯವಾದ ವಿಶೇಷ ಪರಿಸ್ಥಿತಿ ಅಥವಾ ಅಸಾಮಾನ್ಯವಾದ ಪರಿಸ್ಥಿತಿಯನ್ನು ಆತನು ಸಮರ್ಥಿಸುವ ಅಗತ್ಯವಿರುವುದಿಲ್ಲ.

9(ಸಿ) ಅಷ್ಟೇ ಅಲ್ಲದೆ, ಮಾನ್ಯ ನ್ಯಾಯವಾದಿಯು ಮಾನ್ಯ ಸರ್ವೋಚ್ಚ ನ್ಯಾಯಾಲಯದ ***ಗುರುಭಕ್ಷ್ ಸಿಂಗ್ ಸಿಬ್ಬಿಯಾ –ವಿರುದ್ಧ– ಪಂಜಾಬ್ ರಾಜ್ಯ ಸರ್ಕಾರ ಮತ್ತು ಸರಬ್ಜಿತ್ ಸಿಂಗ್ ಮತ್ತು ಇನ್ನೊಬ್ಬರು –ವಿರುದ್ಧ– ಪಂಜಾಬ್ ರಾಜ್ಯ ಸರ್ಕಾರ*** [4] ಮೊಕದ್ದಮೆಗಳಲ್ಲಿನ ತೀರ್ಪುಗಳನ್ನು ಕೂಡ ಆಧಾರವಾಗಿಟ್ಟುಕೊಂಡಿದ್ದು, ಅವುಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿನ ಉಪಬಂಧಗಳ ಬಗ್ಗೆ ವ್ಯವಹರಿಸುವಾಗ ಕೆಲವು ಮಹತ್ವದ

3. 991 (2) ಸ್ಕೇಲ್ 150 ಮತ್ತು 170

4. ಎಐಆರ್ 1980 ಎಸ್‌ಸಿ 1632

ಅಂಶಗಳನ್ನು ನಿರೂಪಿಸಿದೆ. ಪಂಜಾಬ್ ಉಚ್ಚ ನ್ಯಾಯಾಲಯದ ನಿರ್ಣಯವನ್ನು ಪರಿಗಣಿಸಿದ ನಂತರ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಎಂತಹ ಪರಿಸ್ಥಿತಿಗಳಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿ ನಿಹಿತವಾದ ವಿವೇಚನಾಧಿಕಾರವನ್ನು ಚಲಾಯಿಸಬಹುದು ಎಂಬ ಬಗ್ಗೆ ಕೆಲವು ಮಾರ್ಗಸೂಚಿಗಳನ್ನು ನಿರೂಪಿಸಿದೆ. ಪಂಜಾಬ್ ಮತ್ತು ಹರಿಯಾಣ ಉಚ್ಚ ನ್ಯಾಯಾಲಯವು ಹೊರಡಿಸಿದ ಸದರಿ ಮಾರ್ಗಸೂಚಿಗಳನ್ನು ದೃಢೀಕರಿಸದೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪ್ಯಾರಾಗ್ರಾಫ್ 12 ರಲ್ಲಿ ಈ ಕೆಳಕಂಡಂತೆ ನಿರ್ಣಯಿಸಿದೆ:

> *"12. ಮಾನ್ಯ ಹೆಚ್ಚುವರಿ ಸಾಲಿಸಿಟರ್ ಜನರಲ್ ಅವರ ವಾದಗಳನ್ನು ಅಥವಾ ಉಚ್ಚ ನ್ಯಾಯಾಲಯದ ಪೂರ್ಣ ಪೀಠವು 438ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರದ ಮೇಲೆ ಅಂತರ್ಗತಗೊಳಿಸಿದ ನಿರ್ಬಂಧಗಳನ್ನು, ಸಂಪೂರ್ಣವಾಗಿ ಒಪ್ಪಿಕೊಳ್ಳಲು ನಮಗೆ ಸಾಧ್ಯವಿಲ್ಲ. 438ನೇ ಪ್ರಕರಣದ (1)ನೇ ಖಂಡವು ಪದಶಃ ವ್ಯಕ್ತವಾದುದಾಗಿದ್ದು, ಸ್ಪಷ್ಟವಾದುದಾಗಿದ್ದು ಅನರ್ಹತೆಯುಳ್ಳದ್ದಾಗಿದೆ. ಯಾವುದೇ ಪ್ರಸಿದ್ಧ ಅರ್ಥವಿವರಣಾ ಮಾನದಂಡದ ಮೂಲಕ ಶಾಸಕಾಂಗವು ಯಾವುದನ್ನು ವಿಧಿಸುವುದು ಸೂಕ್ತ ಅಥವಾ ಅಗತ್ಯ ಎಂದು ಭಾವಿಸಿಲ್ಲವೋ ಅಂಥ ನಿರ್ಬಂಧಗಳು ಮತ್ತು ಷರತ್ತುಗಳನ್ನು ಶಾಸನದ ಭಾಷೆಯಲ್ಲಿ ಓದಿಕೊಳ್ಳುವಂತೆ ವಿಸ್ತಾರ ಮತ್ತು ವೈಶಾಲ್ಯತೆಯುಳ್ಳ ಪದಗಳನ್ನು ಸಾಮಾನ್ಯವಾಗಿ ತುಂಡರಿಸಬಾರದು. ಇದು ವಿಶೇಷವಾಗಿ, ಪರಿಗಣನೆಗಾಗಿ ಬಂದ ಶಾಸನಾತ್ಮಕ ಉಪಬಂಧವನ್ನು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕಿನಂತಹ ಮೌಲ್ಯಯುತವಾದ ಹಕ್ಕನ್ನು ಉಳಿಸುವುದಕ್ಕೆ ವಿನ್ಯಾಸಗೊಳಿಸಿರುವಾಗ ಮತ್ತು ಊಹೆಯ ಅನ್ವಯವನ್ನು ಶಾಸನಾತ್ಮಕವೆಂದು ಭಾವಿಸಿರುವಾಗ ಮತ್ತು ಕ್ರಿಮಿನಲ್ ನ್ಯಾಯಶಾಸ್ತ್ರದಲ್ಲಿನ ಅತ್ಯಂತ ಸೂಕ್ಷ್ಮ ಅಂಶಗಳನ್ನು ಮುಗ್ಧತೆಯ*

*ಊಹೆಯೆಂದು ಭಾವಿಸಿರುವಾಗ ಸತ್ಯವಾದುದಾಗಿರುತ್ತದೆ. ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸುವ ಹಕ್ಕು ಮೊದಲ ಬಾರಿಗೆ 438ನೇ ಪ್ರಕರಣದ ಮೂಲಕ ಪ್ರದತ್ತವಾಗಿದ್ದರೂ, ಆ ಉಪಬಂಧವನ್ನು ಅಧಿನಿಯಮಿಸುವಾಗ ಶಾಸಕಾಂಗವು, ಜಾಮೀನಿಗೆ ಅರ್ಜಿ ಸಲ್ಲಿಸುವ ಹಕ್ಕಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಅಭೂತಪೂರ್ವವಾದ ಕ್ರಮವನ್ನು ತೆಗೆದುಕೊಳ್ಳುವ ಭಾವನೆಯಲ್ಲಿ ಶುದ್ಧ ಇತಿಹಾಸ ಏನೇನೂ ಸೃಷ್ಟಿಸಿಲ್ಲ. ಆ ಹಿಂದೆಂದೂ ಸಂಹಿತೆಯ ಎಂದು ಸಾದೃಶ್ಯ ಉಪಬಂಧಗಳಿದ್ದವು: 437ನೇ ಪ್ರಕರಣ, ಇದು ಜಾಮೀನು – ರಹಿತ ಮೊಕದ್ದಮೆಗಳಲ್ಲಿ ಜಾಮೀನನ್ನು ಮಂಜೂರು ಮಾಡುವ ಸೆಷನ್ಸ್ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯ ಹೊರತಾದ ನ್ಯಾಯಾಲಯಗಳ ಅಧಿಕಾರದ ಬಗ್ಗೆ ವ್ಯವಹರಿಸುತ್ತದೆ ಮತ್ತು 439ನೇ ಪ್ರಕರಣ, ಇದು ಜಾಮೀನಿಗೆ ಸಂಬಂಧಿಸಿದ ಉಚ್ಚ ನ್ಯಾಯಾಲಯ ಮತ್ತು ಸೆಷನ್ಸ್ ನ್ಯಾಯಾಲಯದ "ವಿಶೇಷ ಅಧಿಕಾರಗಳ" ಬಗ್ಗೆ ವ್ಯವಹರಿಸುತ್ತದೆ. ಇಡೀ ಪ್ರಕರಣವು ಜಾಮೀನಿಗೆ ಸಂಬಂಧಿಸಿದ್ದಾಗಿದೆ. 437ನೇ ಪ್ರಕರಣದಲ್ಲಿ ಇರುವುದೆಲ್ಲವೂ ಕೆಲವು ನ್ಯಾಯಾಲಯಗಳ ಜಾಮೀನನ್ನು ಮಂಜೂರು ಮಾಡುವ ಅಧಿಕಾರದ ಮೇಲಿನ ನಿರ್ಬಂಧಗಳ ಮೂಲಕ ಪ್ರತ್ಯೇಕಗೊಂಡು ರಕ್ಷಿತವಾಗಿವೆ."*

ಸರ್ವೋಚ್ಚ ನ್ಯಾಯಾಲಯವು ಮುಂದುವರಿದು, ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣವು 437 ಮತ್ತು 439ನೇ ಪ್ರಕರಣಗಳಿಂದ ಪ್ರತ್ಯೇಕಿಸಲಾದ ಪ್ರಕರಣವಾಗಿದೆ, ದಂಡ ಪ್ರಕ್ರಿಯಾ ಸಂಹಿತೆಯ 437 ಮತ್ತು 439ನೇ ಪ್ರಕರಣಗಳ ಉಪಬಂಧಗಳು ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣವನ್ನು ಅಧಿನಿಯಮಿಸುವಾಗ ನಕಲು ಮಾಡಲು ಅನುಕೂಲಕರವಾದ ಮಾದರಿಯನ್ನು ಶಾಸಕಾಂಗಕ್ಕೆ ಒದಗಿಸಿವೆ ಎಂದೂ ಸಹ ನಿರ್ಣಯಿಸಿದೆ.

*"437 ಮತ್ತು 439ನೇ ಪ್ರಕರಣಗಳ ಉಪಬಂಧಗಳು 438ನೇ ಪ್ರಕರಣವನ್ನು ಅಧಿನಿಯಮಿಸುವಾಗ ನಕಲು ಮಾಡಲು ಅನುಕೂಲಕರವಾದ ಮಾದರಿಯನ್ನು ಶಾಸಕಾಂಗಕ್ಕೆ ಒದಗಿಸಿವೆ. ಹಾಗೆ ಮಾಡದಿದ್ದರೆ ಮತ್ತು ಅಗತ್ಯ ಮಾರ್ಪಾಟುಗಳನ್ನು ಸುಲಭವಾಗಿ ಅಳವಡಿಸಿಕೊಳ್ಳಬಹುದಾದ ಮಾದರಿಯಿಂದ ನಿರ್ಗಮಿತವಾದರೆ, ಯಾವುದೇ ವಿಶೇಷ ಅಥವಾ ನಿರ್ದಿಷ್ಟ ಉದ್ದೇಶವನ್ನು ಈಡೇರಿಸುವ ಅಪೇಕ್ಷೆಯನ್ನು ಹೊಂದಿಲ್ಲವೆಂದು ಭಾವಿಸುವ ಮೂಲಕ ಆ ನಿರ್ಗಮನಕ್ಕೆ ಸಂಪೂರ್ಣ ಪರಿಣಾಮವನ್ನು ನೀಡಲು ನಿರಾಕರಿಸುವುದು ತಪ್ಪಾಗುತ್ತದೆ. ನಮ್ಮ ಅಭಿಪ್ರಾಯದಲ್ಲಿ ಹೇಳುವುದಾದರೆ, ಅಂಥ ನಿರ್ಗಮನವನ್ನು ವಿವೇಚನಾಯುತವಾಗಿ ಮತ್ತು ಉದ್ದೇಶಪೂರ್ವಕವಾಗಿ ಮಾಡಲಾಗಿದೆ: ಕಾನೂನು ಆಯೋಗದ 41ನೇ ವರದಿಯ ಕಾರಣದಿಂದ ಕನಿಷ್ಠ ಪಕ್ಷ ಅದು ಭಾಗಶಃ ವಿವೇಚನಾಯುತವಾದುದಾಗಿದ್ದು, ವರದಿಯ 39.9ನೇ ಪ್ಯಾರಾದಲ್ಲಿ, ನಿರೀಕ್ಷಣಾ ಜಾಮೀನು ನೀಡುವುದಕ್ಕೆ ಉಚ್ಚ ನ್ಯಾಯಾಲಯ ಮತ್ತು ಸೆಷನ್ಸ್ ನ್ಯಾಯಾಲಯವನ್ನು ಸಶಕ್ತಗೊಳಿಸುವ ಉಪಬಂಧವನ್ನು ಸಂಹಿತೆಯಲ್ಲಿ ಪರಿಚಯಿಸುವ ಅಗತ್ಯತೆಯ ಬಗ್ಗೆ ಹೇಳುವಾಗ, ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡಬಹುದಾದ ಶಾಸನದಡಿಯಲ್ಲಿಯೇ ಕೆಲವು ಷರತ್ತುಗಳನ್ನು ವಿಧಿಸುವ ಪ್ರಶ್ನೆಯನ್ನು ಪರಿಗಣಿಸಿದೆಯೆಂದು, ಆದರೆ ಅಂಥ ಜಾಮೀನನ್ನು ನೀಡುವ ಪ್ರಶ್ನೆಯನ್ನು "ನ್ಯಾಯಾಲಯದ ವಿವೇಚನೆಗೆ ಬಿಡಬೇಕೇ" ಹೊರತು, ವಿವೇಚನಾಧಿಕಾರವನ್ನು ನ್ಯಾಯಯುತವಾಗಿ ಚಲಾಯಿಸುತ್ತದೆಂದು ನಿರೀಕ್ಷಿಸಲಾದ ಉನ್ನತ ನ್ಯಾಯಾಲಯಗಳ ಮೇಲೆ ವಿವೇಚನಾಧಿಕಾರವನ್ನು ಪ್ರದತ್ತಗೊಳಿಸಲಾಗಿರುವುದರಿಂದ ಶಾಸನಾತ್ಮಕ ಪ್ರತಿಬಂಧವೇ ಅದನ್ನು ನಿರ್ಬಂಧಕ್ಕೊಳ*

*ಪಡಿಸಬಾರದು ಎಂಬ ನಿರ್ಣಯಕ್ಕೆ ಬರಲಾಗಿದೆಯೆಂದು ಹೇಳಿದೆ. ಮೊದಲನೆಯದಾಗಿ, ಯಾವ ಷರತ್ತುಗಳ ಅಡಿಯಲ್ಲಿ ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡಬೇಕು ಅಥವಾ ಮಂಜೂರು ಮಾಡಬಾರದು ಎಂದು ನಿರೂಪಿಸುವ ಷರತ್ತುಗಳನ್ನು ವಿಧಿಸುವುದು ಕಷ್ಟಕರವಾದುದೆಂದು ಶಾಸಕಾಂಗವು ಸ್ಪಷ್ಟವಾಗಿ ಮನಗಂಡಿರುವ ಕಾರಣದಿಂದ ಮತ್ತು ಎರಡನೆಯದಾಗಿ, ನಿರೀಕ್ಷಣಾ ಜಾಮೀನಿನ ಸ್ವರೂಪದ ಪರಿಹಾರವನ್ನು ನೀಡುವಲ್ಲಿ ಉಚ್ಚ ನ್ಯಾಯಾಲಯಗಳಿಗೆ ಸ್ವಲ್ಪಮಟ್ಟಿಗೆ ಮುಕ್ತ ಸ್ವಾತಂತ್ರ್ಯವನ್ನು ನೀಡುವ ಉದ್ದೇಶವನ್ನು ಹೊಂದಿರುವ ಕಾರಣದಿಂದ ಶಾಸಕಾಂಗವು ಉಚ್ಚ ನ್ಯಾಯಾಲಯ ಮತ್ತು ಸೆಷನ್ಸ್ ನ್ಯಾಯಾಲಯಗಳಿಗೆ ವ್ಯಾಪಕ ವಿವೇಚನಾಧಿಕಾರವನ್ನು ಪ್ರದತ್ತಗೊಳಿಸಿದೆ. . . . .".*

9(ಡಿ) ***ಸಿಬಿಐ –ವಿರುದ್ಧ– ಗುಜರಾತ್ ರಾಜ್ಯ ಸರ್ಕಾರ*** [5] ಮೊಕದ್ದಮೆಯ ಮತ್ತೊಂದು ತೀರ್ಪಿನಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಸೆಷನ್ಸ್ ನ್ಯಾಯಾಲಯಕ್ಕೆ ಮತ್ತು ಉಚ್ಚ ನ್ಯಾಯಾಲಯಕ್ಕೆ ಸಮವರ್ತೀ ಅಧಿಕಾರ ವ್ಯಾಪ್ತಿಯನ್ನು ನೀಡುವ ದಂಡ ಪ್ರಕ್ರಿಯಾ ಸಂಹಿತೆಯ ಮತ್ತೊಂದು 397ನೇ ಪ್ರಕರಣದ ಅಡಿಯಲ್ಲಿನ ಉಪಬಂಧದ ಬಗ್ಗೆ ವ್ಯವಹರಿಸುವಾಗ ಈ ಕೆಳಕಂಡಂತೆ ಅಭಿಪ್ರಾಯಪಟ್ಟಿದೆ:

*"ದಂಡ ಪ್ರಕ್ರಿಯಾ ಸಂಹಿತೆಯ 397ನೇ ಪ್ರಕರಣ – ಸಿಜೆಎಂ ಆದೇಶದ ವಿರುದ್ಧ ಪರಿಷ್ಕರಣಾ ಅರ್ಜಿಯನ್ನು ಸೆಷನ್ಸ್ ನ್ಯಾಯಾಲಯದ ಮುಂದೆ ಸಲ್ಲಿಸುವ ಬದಲಾಗಿ ನೇರವಾಗಿ ಉಚ್ಚ ನ್ಯಾಯಾಲಯದ ಮುಂದೆ ಸಲ್ಲಿಸಬಹುದಾಗಿದೆ. ಅಂಥ ಪರಿಷ್ಕರಣಾ ಅರ್ಜಿಯನ್ನು ಪುರಸ್ಕರಿಸುವುದಕ್ಕೆ ಉಚ್ಚ*

5. (2007) 6 ಎಸ್‌ಸಿಸಿ 156

*ನ್ಯಾಯಾಲಯಕ್ಕೆ ಯಾವುದೇ ಪ್ರತಿಷೇಧವಿಲ್ಲ. ವಾಸ್ತವ ಸಂಗತಿಗಳ ಮೇಲೆ ಹೇಳುವುದಾದರೆ, ಉಚ್ಚ ನ್ಯಾಯಾಲಯವು ಸಿಬಿಐ ಅನ್ನು ಟೀಕಿಸುವುದು ತಪ್ಪು ಎಂದು ಅಭಿಪ್ರಾಯಪಟ್ಟಿದೆ".*

ಈ ತೀರ್ಪುಗಳೂ ಕೂಡ ಸೀಮಿತ ಮಾದರಿಯುಳ್ಳ ತೀರ್ಪುಗಳಾಗಿದ್ದು, ಪ್ರಸ್ತುತ ಮೊಕದ್ದಮೆಗೆ ಅನ್ವಯವಾಗುವುದಿಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮುಖ್ಯವಾಗಿ ಉಚ್ಚ ನ್ಯಾಯಾಲಯವು ಸಿಬಿಐ ಮೇಲೆ ಮಾಡಿರುವ ದೂಷಣೆಯ ಬಗ್ಗೆ ಕೇಂದ್ರೀಕರಿಸಿದೆಯೇ ಹೊರತು, ಸಮವರ್ತೀ ಅಧಿಕಾರ ವ್ಯಾಪ್ತಿಯ ಬಗ್ಗೆ ವ್ಯವಹರಿಸಿಲ್ಲ ಮತ್ತು ಅಂಥ ಯಾವುದೇ ಕಾನೂನನ್ನು ನಿರೂಪಣೆ ಮಾಡಿಲ್ಲ.

10. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಕೆಲವು ನಿರ್ಣಯಗಳನ್ನು ಮಾಡಿದ್ದರೂ ಕೂಡ, ಈ ನ್ಯಾಯಾಲಯದ ಮುಂದೆ ಎತ್ತಲಾಗಿರುವ ಪ್ರಶ್ನೆಯನ್ನು ಮಾತ್ರ ನಿರ್ದಿಷ್ಟವಾಗಿ ಉತ್ತರಿಸಿಲ್ಲ. ಸ್ಪಷ್ಟವಾದ ಮಾತಿನ ಮೂಲಕವೂ ಕೂಡ ಸರ್ವೋಚ್ಚ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿನ ಉಚ್ಚ ನ್ಯಾಯಾಲಯ ಮತ್ತು ಸೆಷನ್ಸ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು ಸಮವರ್ತೀ ಅಧಿಕಾರ ವ್ಯಾಪ್ತಿಯ ಸ್ವರೂಪದ್ದಾಗಿದೆ ಮತ್ತು ಅದು ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡುವುದಕ್ಕೆ ಉಚ್ಚ ನ್ಯಾಯಾಲಯ ಹಾಗೂ ಸೆಷನ್ಸ್ ನ್ಯಾಯಾಲಯಗಳಿಗೆ ನೀಡಿದ ವಿಶೇಷ ಅಧಿಕಾರವಾಗಿದೆ ಮತ್ತು ಆ ಪ್ರಕರಣದಲ್ಲಿ ಅಂತರ್ಗತವಾಗಿಲ್ಲದ ನ್ಯಾಯಾಲಯಗಳ ವಿವೇಚನಾಧಿಕಾರದ ಮೇಲಿನ ಯಾವುದೇ ನಿರ್ಬಂಧಗಳನ್ನು ವಿಧಿಸಲು ಸಾಧ್ಯವಿಲ್ಲವೆಂದು ಹೇಳಿದೆ.

11. ಈಗ, ರಾಜ್ಯ ಸರ್ಕಾರವು ಆಧಾರವಾಗಿಟ್ಟುಕೊಂಡ ತೀರ್ಪುಗಳ ಬಗ್ಗೆ ಗಮನ ಹರಿಸೋಣ. ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರೀ ನ್ಯಾಯವಾದಿಯೂ ಕೂಡ ಈ ಸಂಬಂಧವಾಗಿ ಹಲವಾರು ತೀರ್ಪುಗಳನ್ನು ಆಧಾರವಾಗಿಟ್ಟುಕೊಂಡಿದ್ದಾರೆ.

12. ***ಶ್ರೀ ಸಿ.ಪಿ. ಯೋಗೇಶ್ವರ ಮತ್ತು ಇತರರು –ವಿರುದ್ಧ– ಗಂಭೀರ ವಂಚನೆ ತನಿಖಾ ಕಚೇರಿ*** [6] ನಡುವಿನ ತೀರ್ಪನ್ನು ಇಲ್ಲಿ ಉಲ್ಲೇಖಿಸುವುದು ಅನುಕೂಲಕರವಾಗುತ್ತದೆ, ಅದರಲ್ಲಿ, ಈ ನ್ಯಾಯಾಲಯವು ಹಿಂದಿನ ಹಲವಾರು ತೀರ್ಪುಗಳನ್ನು ಅವಲಂಬಿಸಿ, ಪಕ್ಷಕಾರರು ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿ ಮೊದಲು ಸೆಷನ್ಸ್ ನ್ಯಾಯಾಲಯದ ಮುಂದೆ ಹೋಗಬೇಕು, ಅಲ್ಲಿ ಅವರು ಯಶಸ್ವಿಯಾಗದಿದ್ದರೆ ಆನಂತರ ಅವರು ಅದೇ ಉಪಬಂಧದ ಅಡಿಯಲ್ಲಿ ಉಚ್ಚ ನ್ಯಾಯಾಲಯದ ಮುಂದೆ ಹೋಗಬಹುದು ಎಂಬ ನಿರ್ಣಯಕ್ಕೆ ಬಂದಿದೆ.

12(ಎ) ಈ ಸಂಬಂಧ ಈ ನ್ಯಾಯಾಲಯದ ಹಿಂದಿನ ತೀರ್ಪುಗಳನ್ನು ಗಮನಿಸುವುದೂ ಕೂಡ ಸೂಕ್ತವಾಗುತ್ತದೆ. ***ಅಯ್ಯ –ವಿರುದ್ಧ– ಕರ್ನಾಟಕ ರಾಜ್ಯ ಸರ್ಕಾರ*** [7] ಮೊಕದ್ದಮೆಯಲ್ಲಿನ ತೀರ್ಪಿನಲ್ಲಿ, ಪ್ಯಾರಾಗ್ರಾಫ್ 7 ರಲ್ಲಿ, ಈ ನ್ಯಾಯಾಲಯವು ಈ ಕೆಳಕಂಡಂತೆ ನಿರ್ಣಯಿಸಿದೆ:

> *"7. ಸೆಷನ್ಸ್ ನ್ಯಾಯಾಲಯ ಮತ್ತು ಈ ನ್ಯಾಯಾಲಯ ಎರಡೂ ನ್ಯಾಯಾಲಯಗಳು ಈ ವಿಷಯದಲ್ಲಿ ಸಮವರ್ತೀ ಅಧಿಕಾರಗಳನ್ನು ಹೊಂದಿರುವುದರಿಂದ, ಒಂದಕ್ಕಿಂತ ಹೆಚ್ಚು ಕಾರಣಗಳಿಗಾಗಿ, ಈ ವಿಷಯದಲ್ಲಿ ಮೊದಲು ಸೆಷನ್ಸ್ ನ್ಯಾಯಾಲಯದ ಮುಂದೆ ಹೋಗಬೇಕಾದುದು ಅಪೇಕ್ಷಣೀಯವೆಂದೆನಿಸುತ್ತದೆ".*

ಇಂಥ ನಿರ್ಣಯಕ್ಕೆ ಬರುವ ಉದ್ದೇಶಕ್ಕಾಗಿ ಈ ನ್ಯಾಯಾಲಯವು ಹಲವಾರು ಅರ್ಹ ಕಾರಣಗಳನ್ನು ನೀಡಿದೆ.

6. ಕ್ರಿಮಿನಲ್ ಅರ್ಜಿ ಸಂಖ್ಯೆ 4258/2012, ದಿನಾಂಕ 1.3.2013

7. 1983(2) ಕೆಎಲ್‌ಜೆ 8

12(ಬಿ) ***ಶ್ರೀಮತಿ ಸಾವಿತ್ರಿ ಸ್ಯಾಮ್ಸನ್ -ವಿರುದ್ಧ- ಕರ್ನಾಟಕ ರಾಜ್ಯ ಸರ್ಕಾರ*** [8] ನಡುವಿನ ಮತ್ತೊಂದು ತೀರ್ಪಿನಲ್ಲಿ, ಈ ನ್ಯಾಯಾಲಯವು ಅದೇ ಅಂಶವನ್ನೇ ಪುನರುಚ್ಚರಿಸಿ, ಈ ಕೆಳಕಂಡಂತೆ ನಿರ್ಣಯಿಸಿದೆ:

> *"ಸಂಹಿತೆಯಲ್ಲಿರುವ ಸಾದೃಶ್ಯ ಉಪಬಂಧಗಳನ್ನು ಪರಿಶೀಲಿಸುವ ಮೂಲಕ ಸಾಮಾನ್ಯವಾಗಿ ಊಹಿಸಿಕೊಳ್ಳಬೇಕಾದದ್ದೇನೆಂದರೆ, ಸೆಷನ್ಸ್ ನ್ಯಾಯಾಲಯದ ಮೊರೆ ಹೋಗದಿರುವುದಕ್ಕೆ ಸೂಕ್ತ ಮೊಕದ್ದಮೆಯಾಗಿರುವ ಹೊರತು, ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿ ಜಾಮೀನಿನ ಮಂಜೂರಾತಿಗಾಗಿ ಮೊದಲು ಸೆಷನ್ಸ್ ನ್ಯಾಯಾಲಯಕ್ಕೆ ಹೋಗಬೇಕಾಗುತ್ತದೆ".*

12(ಸಿ). ***ಶಿವಸುಬ್ರಹ್ಮಣ್ಯಂ -ವಿರುದ್ಧ- ಕರ್ನಾಟಕ ರಾಜ್ಯ ಸರ್ಕಾರ ಮತ್ತು ಇನ್ನೊಬ್ಬರು*** [9] ನಡುವಿನ ಮತ್ತೊಂದು ತೀರ್ಪಿನಲ್ಲಿ, ಈ ನ್ಯಾಯಾಲಯವು, ಮೇಲ್ಕಂಡ ಸದರಿ ಮೂಲ ತತ್ವಗಳನ್ನೇ ಪುನರುಚ್ಚರಿಸಿದ್ದು, ಅಂತಿಮವಾಗಿ, ಉಚ್ಚ ನ್ಯಾಯಾಲಯಕ್ಕೆ ನೇರವಾಗಿ ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯು ಅಪವಾದಾತ್ಮಕ ಮತ್ತು ವಿಶೇಷ ಪರಿಸ್ಥಿತಿಗಳ ಅಡಿಯಲ್ಲಿ ಮಾತ್ರ ಸಮರ್ಥನೀಯವಾಗುತ್ತದೆಯೇ ಹೊರತು, ಪಕ್ಷಕಾರನು ಮಾಮೂಲಿನಂತೆ ಹಕ್ಕೆಂದು ಭಾವಿಸಿ ಈ ನ್ಯಾಯಾಲಯದ ಮುಂದೆ ನೇರವಾಗಿ ಹೋಗಲಾಗದು ಎಂದು ನಿರ್ಣಯಿಸಿದೆ.

12(ಡಿ) ***ಚಂದ್ರ ಈರಪ್ಪ -ವಿರುದ್ಧ- ಕರ್ನಾಟಕ ರಾಜ್ಯ ಸರ್ಕಾರ*** [10] ನಡುವಿನ ಮತ್ತೊಂದು ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠಕ್ಕೆ ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಉಪಬಂಧಗಳನ್ನು ಮತ್ತು

8. ಐಎಲ್‌ಆರ್ 2001 ಕೆಎಆರ್ 4080 9. 2002 ಕ್ರಿ. ಎಲ್‌ಜೆ 1998

10. ಐಎಲ್‌ಆರ್ 1989 ಕೆಎಆರ್ 2882

ಉಚ್ಚ ನ್ಯಾಯಾಲಯ ಹಾಗೂ ಸೆಷನ್ಸ್ ನ್ಯಾಯಾಲಯ ಎರಡರ ಮೇಲೂ ಪ್ರದತ್ತವಾದ ಸಮವರ್ತೀ ಅಧಿಕಾರ ವ್ಯಾಪ್ತಿಯನ್ನು ಪರಿಗಣಿಸುವ ಅವಕಾಶ ಒದಗಿಬಂದಿತ್ತು. ಅಂತಿಮವಾಗಿ ನ್ಯಾಯಾಲಯವು ಈ ಕೆಳಕಂಡಂತೆ ನಿರ್ಣಯಿಸಿದೆ:

> *"ನ್ಯಾಯಾಲಯಗಳ ಶ್ರೇಣೀಕರಣವನ್ನು ಗಮನದಲ್ಲಿಟ್ಟುಕೊಂಡರೆ ಮತ್ತು ಸೆಷನ್ಸ್ ನ್ಯಾಯಾಲಯವು ಉಚ್ಚ ನ್ಯಾಯಾಲಯಕ್ಕೆ ಅಧೀನವಾದ ನ್ಯಾಯಾಲಯವೆಂಬುದನ್ನು ಗಮನಿಸಿದರೆ, ಮೊದಲು ಸೆಷನ್ಸ್ ನ್ಯಾಯಾಲಯದ ಮುಂದೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದಡಿಯಲ್ಲಿ ಅರ್ಜಿ ಸಲ್ಲಿಸುವ ಪಕ್ಷಕಾರನು, ಸೆಷನ್ಸ್ ನ್ಯಾಯಾಲಯವು ಆತನ ಅರ್ಜಿಯನ್ನು ತಿರಸ್ಕರಿಸಿದರೆ, ಉಚ್ಚ ನ್ಯಾಯಾಲಯದ ಮೊರೆ ಹೋಗಬಹುದು. ಆದರೆ ಮೊದಲೇ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರೆ ಹಿಮ್ಮುಖವಾದ ಪ್ರಕ್ರಿಯೆ ಸಾಧ್ಯವಾಗುವುದಿಲ್ಲವೆಂದು ನ್ಯಾಯಾಲಯವು ನಿರ್ಣಯಿಸಿದೆ".*

13. ಈ ನ್ಯಾಯಾಲಯದ ವಿಭಾಗೀಯ ಪೀಠವೂ ಸೇರಿದಂತೆ ಈ ನ್ಯಾಯಾಲಯದ ಮೇಲ್ಕಂಡ ಸದರಿ ತೀರ್ಪುಗಳನ್ನು ಪರಿಶೀಲಿಸಿದರೆ, ಪಕ್ಷಕಾರನು ಮೊದಲು ಸೆಷನ್ಸ್ ನ್ಯಾಯಾಲಯದ ಮುಂದೆ ಹೋಗಬೇಕು, ಆ ನಂತರ ಆತನು ಉಚ್ಚ ನ್ಯಾಯಾಲಯದ ಮುಂದೆ ಹೋಗಬಹುದು. ಇದು ಮಾಮೂಲಿ ಪ್ರಕ್ರಿಯೆಯಾಗಿದೆ ಎಂಬುದು ನ್ಯಾಯಾಲಯಗಳ ದೃಢವಾದ ಅಭಿಪ್ರಾಯವಾಗಿರುವುದು ಕಂಡು ಬರುತ್ತದೆ. ಆದರೆ, ವಿಶೇಷ ಕಾರಣಗಳಿರುವ ಅಸಾಧಾರಣ ಪರಿಸ್ಥಿತಿಗಳಲ್ಲಿ ಪಕ್ಷಕಾರನು ಉಚ್ಚ ನ್ಯಾಯಾಲಯಕ್ಕೂ ಕೂಡ ಮೊರೆ ಹೋಗಬಹುದೆಂದು ಸಹ ನ್ಯಾಯಾಲಯಗಳು ಅಭಿಪ್ರಾಯಪಟ್ಟಿವೆ. ಉಚ್ಚ ನ್ಯಾಯಾಲಯವು ಸದರಿ ಅರ್ಜಿಯನ್ನು ಪುರಸ್ಕರಿಸುವುದಕ್ಕೆ ಯಾವುದೇ ವಿಶೇಷ ಕಾರಣಗಳು ಅಥವಾ ವಿಶೇಷ ಪರಿಸ್ಥಿತಿಗಳಿವೆಯೇ ಎಂಬುದನ್ನು ಪರಿಶೀಲಿಸದೆ, ಮಾಮೂಲಿ ವಿಷಯವೆಂಬಂತೆ ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣವನ್ನು ಪುರಸ್ಕರಿಸುವಂತಿಲ್ಲ.

14. ***ಶ್ರೀ ಕ್ವಂತ ಗ್ವರ ಬ್ರಹ್ಮ -ವಿರುದ್ಧ- ಅಸ್ಸಾಂ ರಾಜ್ಯ ಸರ್ಕಾರ*** [11] ನಡುವಿನ ಮೊಕದ್ದಮೆಯ ಗುವಾಹಟಿ ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿ ವಿಭಾಗೀಯ ಪೀಠವೂ ಸಹ ಅದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು, ಪಕ್ಷಕಾರನು ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿ ಮೊದಲು ಸೆಷನ್ಸ್ ನ್ಯಾಯಾಲಯದ ಮೊರೆ ಹೋಗಬೇಕು, ಆ ನಂತರ ಮುಂದೆ ಉಚ್ಚ ನ್ಯಾಯಾಲಯದ ಮೊರೆ ಹೋಗಬಹುದೆಂದು ನಿರ್ಣಯಿಸಿದೆ.

15. ವಿವಿಧ ಉಚ್ಚ ನ್ಯಾಯಾಲಯಗಳ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರೀ ನ್ಯಾಯವಾದಿಗಳು ಉಲ್ಲೇಖಿಸಿದ ಹಲವಾರು ತೀರ್ಪುಗಳಿಂದ ಕಂಡು ಬರಬಹುದಾದಂತೆ, ಪಕ್ಷಕಾರರು ಮೊದಲು ಸೆಷನ್ಸ್ ನ್ಯಾಯಾಲಯದ ಮೊರೆ ಹೋಗಬೇಕು ಮತ್ತು ಅಲ್ಲಿನ ಪರಿಹಾರವನ್ನು ನಿಶ್ಶೇಷಗೊಳಿಸಿಕೊಂಡ ನಂತರ ಅವರು ಉಚ್ಚ ನ್ಯಾಯಾಲಯದ ಮೊರೆ ಹೋಗಬಹುದು. ಆದರೆ ವಿಶೇಷ ಕಾರಣಗಳಿಗಾಗಿ, ನೇರವಾಗಿ ಉಚ್ಚ ನ್ಯಾಯಾಲಯಕ್ಕೂ ಮೊರೆ ಹೋಗಬಹುದೆಂಬ ಅಭಿಪ್ರಾಯವನ್ನೇ ಅವರೂ ತಾಳಿದ್ದಾರೆ.

16. ಮೇಲೆ ಗಮನಿಸಿದಂತೆ ***ಕೆ.ಸಿ. ಅಯ್ಯ -ವಿರುದ್ಧ- ಕರ್ನಾಟಕ ರಾಜ್ಯ ಸರ್ಕಾರ*** ಮೊಕದ್ದಮೆಯಲ್ಲಿ ಈ ನ್ಯಾಯಾಲಯವು, ಈ ಉಪಬಂಧದ ಬಗ್ಗೆ ಮತ್ತು ಉಚ್ಚ ನ್ಯಾಯಾಲಯ ಹಾಗೂ ಸೆಷನ್ಸ್ ನ್ಯಾಯಾಲಯದ ಸಮವರ್ತೀ ಅಧಿಕಾರ ವ್ಯಾಪ್ತಿ ಬಗ್ಗೆಯೂ ಕೂಡ ವ್ಯವಹರಿಸಿ, ಈ ಸಂಬಂಧ ಉದ್ಭವಿಸಿರುವ ಹಲವು ಅಂಶಗಳನ್ನು ಈ ನ್ಯಾಯಾಲಯವು ಪರಿಗಣಿಸಿರುವುದಷ್ಟೇ ಅಲ್ಲದೆ, ***ಗುರುಬಕ್ಷ್ ಸಿಂಗ್ ಸಿಬ್ಬಿಯಾ -ವಿರುದ್ಧ- ಪಂಜಾಬ್ ರಾಜ್ಯ ಸರ್ಕಾರ*** ಮೊಕದ್ದಮೆಯಲ್ಲಿನ ಮತ್ತು ***ಸರಬ್ಜಿತ್ ಸಿಂಗ್ ಮತ್ತು ಇನ್ನೊಬ್ಬರು -ವಿರುದ್ಧ- ಪಂಜಾಬ್ ರಾಜ್ಯ ಸರ್ಕಾರ*** ಮೊಕದ್ದಮೆಯಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪರಿಣಾಮವನ್ನು ಮತ್ತು ಇತರ ಉಚ್ಚ ನ್ಯಾಯಾಲಯಗಳ ಹಲವಾರು ತೀರ್ಪುಗಳನ್ನು ಸಹ

11. ಬಿಎ ಸಂ.3024/2014

ಪರಿಗಣಿಸಿದ್ದು, ಅಂತಿಮವಾಗಿ ಸದರಿ ಉಪಬಂಧವನ್ನು ವ್ಯಾಖ್ಯಾನಿಸಿದ ನಂತರ, ಪಕ್ಷಕಾರನು ಮೊದಲು ಸೆಷನ್ಸ್ ನ್ಯಾಯಾಲಯದ ಮೊರೆ ಹೋಗಬೇಕು, ಆ ನಂತರ ಉಚ್ಚ ನ್ಯಾಯಾಲಯದ ಮೊರೆ ಹೋಗಬಹುದು ಅಥವಾ ವಿಶೇಷ ಕಾರಣಗಳಿಗಾಗಿ, ಆತನು ಉಚ್ಚ ನ್ಯಾಯಾಲಯಕ್ಕೇ ಮೊರೆ ಹೋಗಬಹುದೆಂದು ಅದು ನಿರ್ಣಯಿಸಿದೆ.

17. ಮೇಲ್ಕಂಡ ಸದರಿ ತೀರ್ಪುಗಳನ್ನು ಮತ್ತು ***ಗುರುಬಕ್ಷ್ ಸಿಂಗ್*** ಮೊಕದ್ದಮೆಯಲ್ಲಿ ನಿರೂಪಿಸಲಾದ ಮೂಲತತ್ವಗಳನ್ನೂ ಸಹ ಪರಿಶೀಲಿಸಿದರೆ, ಉಚ್ಚ ನ್ಯಾಯಾಲಯ ಹಾಗೂ ಸೆಷನ್ಸ್ ನ್ಯಾಯಾಲಯದ ಸಮವರ್ತಿ ಅಧಿಕಾರಗಳಿಗೆ ಸಂಬಂಧಿಸಿದಂತೆ ಯಾವುದೇ ವಿವಾದಾಸ್ಪದ ಅಂಶವೂ ಇಲ್ಲವೆಂಬುದು ಸುಸ್ಪಷ್ಟವಾಗುತ್ತದೆ.

18. ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣವನ್ನು ಜಾರಿಗೆ ತಂದಿರುವ ಉದ್ದೇಶ, ತುರ್ತು ಸನ್ನಿವೇಶಗಳಲ್ಲಿ ವಿಶೇಷ ಪರಿಸ್ಥಿತಿಗಳ ಸಂದರ್ಭದಲ್ಲಿ ಸೆಷನ್ಸ್ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯಗಳೆರಡೂ ಸಹವರ್ತಿಯಾಗಿ ಚಲಾಯಿಸಬಹುದಾಗಿರುವ ಸಂದರ್ಭಗಳಿದ್ದರೆ ಎರಡೂ ನ್ಯಾಯಾಲಯಗಳಿಗೆ ಮೊರೆ ಹೋಗಲು ದೇಶದ ಪ್ರತಿಯೊಬ್ಬ ವ್ಯಕ್ತಿಗೂ ಅವಕಾಶ ಕಲ್ಪಿಸುವುದಾಗಿದೆ. ಅಂಥ ಪರಿಹಾರವನ್ನು ಯಾವುದೇ ವಿಶೇಷ ಷರತ್ತನ್ನು ವಿಧಿಸುವ ಮೂಲಕ ಇಕ್ಕಟ್ಟಿಗೆ ಸಿಲುಕಿಸುವಂತಿಲ್ಲವಾದರೂ, ನ್ಯಾಯಾಲಯವು ಜಾಮೀನು ಅರ್ಜಿಯನ್ನು ಪುರಸ್ಕರಿಸಲು ನಿರಾಕರಿಸಿ, ಮೊದಲು ಸೆಷನ್ಸ್ ನ್ಯಾಯಾಲಯದ ಮೊರೆ ಹೋಗುವಂತೆ ಪಕ್ಷಕಾರನಿಗೆ ನಿರ್ದೇಶಿಸಬಹುದು, ಏಕೆಂದರೆ, ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣವನ್ನು ಪಕ್ಷಕಾರನು ಹಕ್ಕೆಂಬಂತೆ ಚಲಾಯಿಸಬಾರದು, ಆದರೂ, ಸೆಷನ್ಸ್ ನ್ಯಾಯಾಲಯದ ಮುಂದಾಗಲಿ ಅಥವಾ ಉಚ್ಚ ನ್ಯಾಯಾಲಯದ ಮುಂದಾಗಲಿ ಪರಿಹಾರ ಕೋರಬಹುದಾಗಿದೆ. ಇದು ಶುದ್ಧವಾಗಿ ಪ್ರತಿಯೊಂದು ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳನ್ನಾಧರಿಸಿ ಅಧಿಕಾರವನ್ನು ಚಲಾಯಿಸುವುದು ನ್ಯಾಯಾಲಯದ ವಿವೇಚನಾಧಿಕಾರವಾಗಿದೆ. ಆದ್ದರಿಂದ, ಉಚ್ಚ ನ್ಯಾಯಾಲಯವು, ಮೊದಲು ಸೆಷನ್ಸ್

ನ್ಯಾಯಾಲಯದ ಮುಂದೆ ಹೋಗಿ, ಆ ನಂತರ ಉಚ್ಚ ನ್ಯಾಯಾಲಯಕ್ಕೆ ಬರುವಂತೆ ಪಕ್ಷಕಾರನಿಗೆ ನಿರ್ದೇಶಿಸಬಹುದಾಗಿದೆ, ಆದರೆ ಶಾಸನದಲ್ಲಿ ಈ ಯಾವುದೇ ನಿರ್ಬಂಧಗಳಿಲ್ಲದಿದ್ದರೂ ನ್ಯಾಯಾಲಯವು ವಿವಿಧ ವಾಸ್ತವ ಸಂಗತಿಗಳನ್ನಾಧರಿಸಿ ಹಾಗೆ ಮಾಡಬಹುದಾಗಿದೆ.

19. ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶವೇನೆಂದರೆ, ಶಾಸನದ ಅಡಿಯಲ್ಲಿ ಒಂದಕ್ಕಿಂತ ಇನ್ನೊಂದು ಉನ್ನತ ನ್ಯಾಯಾಲಯವಾಗಿರುವ ಎರಡು ನ್ಯಾಯಾಲಯಗಳಲ್ಲಿ ಏಕಕಾಲದಲ್ಲಿ ಸಮವರ್ತೀ ಅಧಿಕಾರ ವ್ಯಾಪ್ತಿಯು ನಿಹಿತವಾದರೆ, ಆಗ, ಪಕ್ಷಕಾರನು ಮೊದಲು ಅಧೀನ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವುದು ಸೂಕ್ತವಾಗುತ್ತದೆ. ಏಕೆಂದರೆ, ಸೆಷನ್ಸ್ ನ್ಯಾಯಾಲಯದ ಅಭಿಪ್ರಾಯವನ್ನು ಪರಿಗಣಿಸುವ ಪ್ರಯೋಜನವನ್ನು ಉನ್ನತ ನ್ಯಾಯಾಲಯವು ಹೊಂದಿರುತ್ತದೆ. ಅಷ್ಟೇ ಅಲ್ಲದೆ, ಪಕ್ಷಕಾರನು ಸೆಷನ್ಸ್ ನ್ಯಾಯಾಲಯದ ಮುಂದೆ ಅಥವಾ ಉಚ್ಚ ನ್ಯಾಯಾಲಯದ ಮುಂದೆ ಪರಿಹಾರವನ್ನು ಪಡೆಯುವ ಎರಡು ಅವಕಾಶಗಳನ್ನು ಪಡೆದುಕೊಳ್ಳುತ್ತಾನೆ. ಆದರೆ, ಕೂಡಲೇ ಉಚ್ಚ ನ್ಯಾಯಾಲಯಕ್ಕೆ ಹೋಗಲಾಗುವುದಿಲ್ಲ. ಆದರೆ ವಿಪರ್ಯಾಯ ಸಂದರ್ಭದಲ್ಲಿ ಮಾತ್ರ ಎರಡು ಅವಕಾಶಗಳ ಸಾಧ್ಯತೆ ಇರುತ್ತದೆ.

20. ಅಲ್ಲದೆ, ಸೆಷನ್ಸ್ ನ್ಯಾಯಾಲಯವು ಯಾವಾಗಲೂ ಪಕ್ಷಕಾರರಿಗೆ ಅತಿ ಹತ್ತಿರವಾದ ಮತ್ತು ಸಂಪರ್ಕಿಸಲು ಸುಲಭವಾದ ನ್ಯಾಯಾಲಯವಾಗಿದೆ ಎಂಬುದನ್ನು ಕೂಡ ಗಮನಿಸಬೇಕಾಗುತ್ತದೆ. ಅಷ್ಟೇ ಅಲ್ಲದೆ, ದೇಶದಲ್ಲಿನ ನ್ಯಾಯಾಲಯಗಳ, ಅದರಲ್ಲೂ ಮುಖ್ಯವಾಗಿ ಉನ್ನತ ನ್ಯಾಯಾಲಯಗಳ ಕಾರ್ಯ ಬಾಹುಳ್ಯತೆಯನ್ನು ಪರಿಗಣಿಸಿದರೆ, ಉಚ್ಚ ನ್ಯಾಯಾಲಯಗಳು ಇತ್ಯರ್ಥದಲ್ಲಿರುವ ಭಾರೀ ಪ್ರಮಾಣದ ಬಾಕಿ ಮೊಕದ್ದಮೆಗಳಿಂದ ತುಂಬಿ ಹೋಗಿವೆ. ಉಚ್ಚ ನ್ಯಾಯಾಲಯದ ಮುಂದೆ(ಅದರದೇ ಪ್ರತ್ಯೇಕ ಅಧಿಕಾರ ವ್ಯಾಪ್ತಿಯುಳ್ಳ) ಇತರ ಮೊಕದ್ದಮೆಗಳನ್ನು ಹೊತ್ತು ನ್ಯಾಯಾಲಯದ ಮುಂದೆ ಬರುವ ಇತರ ಪಕ್ಷಕಾರರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಮತ್ತು ಪಕ್ಷಕಾರರಿಗೆ ಪರ್ಯಾಯ ಪರಿಹಾರವನ್ನು

ಒದಗಿಸುವ ಸಲುವಾಗಿಯೂ ಕೂಡ, ಪಕ್ಷಕಾರನು ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿ ಮೊದಲು ಸೆಷನ್ಸ್ ನ್ಯಾಯಾಲಯಕ್ಕೆ ಹೋಗುವುದು ನ್ಯಾಯ ಸಮ್ಮತ ಹಾಗೂ ಅಗತ್ಯವಾಗಿರುತ್ತದೆ, ಆಗ, ಜಾಮೀನು ಮಂಜೂರಾತಿಗಾಗಿ ಮತ್ತು ಇತರ ಪರಿಹಾರಗಳಿಗಾಗಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಅಥವಾ ಸೆಷನ್ಸ್ ನ್ಯಾಯಾಲಯಗಳ ಮುಂದಿನ ಪರಿಹಾರವನ್ನು ನಿಶ್ಯೇಷಗೊಳಿಸಿಕೊಂಡ ನಂತರ ಪಕ್ಷಕಾರರು ಉಚ್ಚ ನ್ಯಾಯಾಲಯಕ್ಕೆ ಬರುವಂತಹ, ತೀವ್ರ ಗಮನಹರಿಸಬೇಕಾದ ಹಾಗೂ ತುರ್ತು ವಿಲೆ ಮಾಡಬೇಕಾದ ಅಗತ್ಯವಿರುವ ಇತರ ಬಾಕಿ ಮೊಕದ್ದಮೆಗಳನ್ನು ವ್ಯವಹರಿಸುವ ಅಮೂಲ್ಯವಾದ ಸಮಯವು ಉಚ್ಚ ನ್ಯಾಯಾಲಯಕ್ಕೆ ದೊರಕುತ್ತದೆ.

21. ನಿರೀಕ್ಷಣಾ ಜಾಮೀನು ಅಥವಾ ಮಾಮೂಲಿ ಜಾಮೀನಿನ ನೀಡಿಕೆಗೆ ವಾಸ್ತವ ಸಂಗತಿಗಳ ಮೌಲ್ಯಮಾಪನ, ಪರಿಶೀಲನೆ, ಮತ್ತು ದಾಖಲೆಯಲ್ಲಿರುವ ಸಮಗ್ರ ಸಾಕ್ಷ್ಯಾಧಾರಗಳ ಪರಿಶೀಲನೆಯ ಅಗತ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ, ಸೆಷನ್ಸ್ ನ್ಯಾಯಾಲಯವು ಯುಕ್ತ ಗಮನ ಹರಿಸಿ, ಸೂಕ್ತ ಆದೇಶವನ್ನು ಈಗಾಗಲೇ ಹೊರಡಿಸಿದ್ದರೆ, ಆಗ ಸೆಷನ್ಸ್ ನ್ಯಾಯಾಲಯವು ನೀಡಿದ ನಿರ್ಣಯವನ್ನು ಪರಿಶೀಲಿಸಿ, ಅದರ ಬಗ್ಗೆ ಸ್ಥೂಲ ನೋಟ ಹರಿಸಿ, ಜರೂರಾಗಿ ಮೊಕದ್ದಮೆಯಲ್ಲಿ ವಿಲೆ ಮಾಡಲು ಉಚ್ಚ ನ್ಯಾಯಾಲಯಕ್ಕೆ ಸುಲಭವಾಗುತ್ತದೆ.

22. ನ್ಯಾಯಾಧೀಶರು ಪರಿಗಣಿತ ಕಾನೂನಿನ ಮೇಲೆ ಮೊಕದ್ದಮೆಗಳನ್ನು ನಿರ್ಣಯಿಸಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡಿರಬೇಕು. ಅವರ ಮುಂದೆ ನ್ಯಾಯ ಕೋರಿ ಬಂದಾಗ ಅವರು ಸಮಾನತಾ ದೃಷ್ಟಿಯಿಂದ ಮತ್ತು ಉತ್ತಮ ವಿವೇಕ ಜ್ಞಾನದಿಂದ ನ್ಯಾಯದಾನ ಮಾಡಬೇಕು. ಹಾಗೆಯೇ ಇಡೀ ನ್ಯಾಯಿಕ ವ್ಯವಸ್ಥೆಗೆ ಮತ್ತು ವ್ಯಾಜ್ಯಕಾರರಾದ ಸಾರ್ವಜನಿಕರಿಗೆ ಅನುಕೂಲವಾಗಬಹುದಾದಂಥ ರೀತಿಯಲ್ಲಿ ಕಾನೂನನ್ನು ವ್ಯಾಖ್ಯಾನಿಸುವುದಕ್ಕೆ ಅಸ್ತಿತ್ವದಲ್ಲಿರುವ ಸಂದರ್ಭದ ಕಡೆಗೆ ದೃಷ್ಟಿಯನ್ನು ಕಳೆದುಕೊಳ್ಳಬಾರದು. ನ್ಯಾಯಾಲಯವು ನ್ಯಾಯಿಕ ಕೌಶಲ್ಯಗಳು ಮತ್ತು ತಂತ್ರಗಳನ್ನು ಬಳಸಿಕೊಳ್ಳುವ ಮೂಲಕ ಯುಕ್ತ ರೀತಿಯಲ್ಲಿ ನ್ಯಾಯೋದ್ದೇಶಗಳನ್ನು ಈಡೇರಿಸುವ ಕಾರ್ಯನೀತಿಯನ್ನು ಅಳವಡಿಸಿಕೊಂಡು ಕಾನೂನನ್ನು ಜಾಣತನದಿಂದ ವ್ಯಾಖ್ಯಾನಿಸುವುದು

ವಿಚಿತ್ರವೇನಲ್ಲ. ಅಂಥ ಪರಿಸ್ಥಿತಿಗಳಲ್ಲಿ ನ್ಯಾಯಾಲಯವು ನ್ಯಾಯವನ್ನು ನೀಡುವಂಥ ಮತ್ತು ಕೇಡನ್ನು ದಮನ ಮಾಡುವಂಥ ರೀತಿಯಲ್ಲಿ ಕಾನೂನನ್ನು ವ್ಯಾಖ್ಯಾನಿಸಬೇಕು. ಕಠಿಣ ಮೂಲತತ್ವಗಳನ್ನು ನಿರೂಪಿಸುವಾಗ ಅದನ್ನು ನಿರ್ಬಂಧಿತ ಸೂತ್ರದಲ್ಲಿ ವ್ಯಾಖ್ಯಾನಿಸಬಾರದು. ನಿರ್ದಿಷ್ಟ ಉಪಬಂಧವನ್ನು ಪರ್ಯಾಲೋಚಿಸುವಾಗ ನ್ಯಾಯಾಧೀಶರು, ಅಂಥ ಶಾಸನವನ್ನು ಯಾಕೆ ಮತ್ತು ಯಾವ ಉದ್ದೇಶದಿಂದ ಶಾಸನಕರ್ತರು ಜಾರಿಗೆ ತಂದರು ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

23. ಸೆಷನ್ಸ್ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯ ಎರಡೂ ಸಮವರ್ತಿಯಾಗಿ ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿ ಜಾಮೀನನ್ನು ಮಂಜೂರು ಮಾಡುವ ಅಧಿಕಾರವನ್ನು ಪಡೆದಿವೆ ಎಂಬುದನ್ನು ಕೂಡ ಇಲ್ಲಿ ಗಮನಿಸುವುದು ಹೆಚ್ಚು ಸೂಕ್ತವಾಗುತ್ತದೆ. ಇದರ ಉದ್ದೇಶ ಏನೆಂದರೆ, ಪಕ್ಷಕಾರನು ದೂರ ಪ್ರದೇಶದಲ್ಲಿ ವಾಸಿಸುತ್ತಿದ್ದರೆ, ಆತನು ಸುಲಭವಾಗಿ ನಿಲುಕಬಹುದಾದ ಸೆಷನ್ಸ್ ನ್ಯಾಯಾಲಯಕ್ಕೆ ನೇರವಾಗಿ ಹೋಗಬಹುದು ಎಂಬುದಾಗಿದೆ. ಆ ಆಶಯ ಮತ್ತು ಉದ್ದೇಶವನ್ನೇ ವರ್ಜಿಸಿದ ಸಂಬಂಧವಾಗಿ ಪಕ್ಷಕಾರನು ಯಾಕೆ ಆ ನ್ಯಾಯಾಲಯಕ್ಕೆ ಹೋಗಲಿಲ್ಲ ಎಂಬ ಬಗ್ಗೆ ವಿವರಣೆ ನೀಡಬೇಕಾಗುತ್ತದೆ. ಇಲ್ಲದಿದ್ದರೆ, ಸೆಷನ್ಸ್ ನ್ಯಾಯಾಲಯಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಆ ಉಪಬಂಧವನ್ನು ಅವಶ್ಯಕತೆ ಇಲ್ಲದಂತೆ ಮಾಡಿದ್ದಕ್ಕೆ ಅದು ಸಮನಾಗುತ್ತದೆ. ಮತ್ತೊಮ್ಮೆ ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಸಂರಚನೆಯನ್ನು ತಿರುಗಿ ಪರಿಶೀಲಿಸಿದರೆ, ನ್ಯಾಯಾಲಯಕ್ಕೆ ಸ್ಪಷ್ಟವಾಗಿ ಅರ್ಜಿಯನ್ನು ಪುರಸ್ಕರಿಸುವ ವಿವೇಚನಾಧಿಕಾರವನ್ನು ನೀಡಿರುವುದು ತಿಳಿಯುತ್ತದೆ. ಇದು ಅಧಿಕಾರವನ್ನು ಚಲಾಯಿಸಲು ನ್ಯಾಯಾಲಯಕ್ಕೆ ನೀಡಿರುವ ವಿವೇಚನಾಧಿಕಾರವಾಗಿದೆ. ವಿವೇಚನಾಧಿಕಾರವು ನ್ಯಾಯಾಲಯದಲ್ಲಿ ನಿಹಿತವಾಗಿರುವಾಗ, ಪಕ್ಷಕಾರನು ಸದರಿ ಉಪಬಂಧದ ಅಡಿಯಲ್ಲಿ ವಿವೇಚನಾಧಿಕಾರದ ಪರಿಹಾರಕ್ಕಾಗಿ ನೇರವಾಗಿ ಉಚ್ಚ ನ್ಯಾಯಾಲಯಕ್ಕೇ ಏಕೆ ಬಂದನು ಎಂಬ ಬಗ್ಗೆ ಆತನು ವಿವರಣೆ ನೀಡಬೇಕಾಗುತ್ತದೆ.

24. ಆದ್ದರಿಂದ, ಮೇಲ್ಕಂಡ ವಿವಿಧ ಉಚ್ಚ ನ್ಯಾಯಾಲಯಗಳ ಸದರಿ ತೀರ್ಪುಗಳನ್ನು ಮತ್ತು ವಿಶೇಷವಾಗಿ, ಈ ನ್ಯಾಯಾಲಯವು ತಾಳಿರುವ ಒಮ್ಮತ ನಿಲುವನ್ನು ನೋಡಿದಾಗ, ಹಿಂದೆ ನ್ಯಾಯಾಲಯವು ತಾಳಿರುವ ಸದರಿ ನಿಲುವಿನಿಂದ ದೂರ ಸರಿಯುವುದಕ್ಕೆ ನನಗೆ ಯಾವುದೇ ಪ್ರಬಲವಾದ ಕಾರಣಗಳೂ ಕಂಡು ಬರುತ್ತಿಲ್ಲ. ಹಾಗಾಗಿ, ಮೇಲೆ ತಿಳಿಸಿದಂತೆ ನಾನು ರೂಪಿಸಿದ ವಿವಾದಾಂಶವನ್ನು ತದನುಸಾರವಾಗಿಯೇ ಉತ್ತರಿಸಬೇಕೆಂಬುದು ನನ್ನ ಅಭಿಪ್ರಾಯವಾಗಿದೆ.

25. ಆದ್ದರಿಂದ, ಎತ್ತಲಾದ ವಿವಾದಾಂಶಕ್ಕೆ ಈ ಕೆಳಕಂಡಂತೆ ಉತ್ತರಿಸಿದ್ದೇನೆ:

> "ಸಮವರ್ತೀ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸೆಷನ್ಸ್ ನ್ಯಾಯಾಲಯದ ಮುಂದಿನ ಪರಿಹಾರವನ್ನು ನಿಶ್ಶೇಷಗೊಳಿಸಿಕೊಳ್ಳದೆ ಉಚ್ಚ ನ್ಯಾಯಾಲಯದ ಮುಂದೆ ದಂಡ ಪ್ರಕ್ರಿಯಾ ಸಂಹಿತೆಯ 438ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿರುವ ಜಾಮೀನು ಅರ್ಜಿಯು ಊರ್ಜಿತವಾಗುವುದಿಲ್ಲ. ಆದರೆ, ಬಾಹ್ಯ ಅಥವಾ ವಿಶೇಷ ಕಾರಣಗಳಿಗಾಗಿ, ಉಚ್ಚ ನ್ಯಾಯಾಲಯವೂ ಸಹ ಸದರಿ ಉಪಬಂಧದ ಅಡಿಯಲ್ಲಿ ಪರಿಹಾರವನ್ನು ನೀಡುವುದಕ್ಕೆ ಅಂಥ ಅಧಿಕಾರವನ್ನೂ ಚಲಾಯಿಸಬಹುದಾಗಿದೆ".

26. ಹೀಗೆ ನಿರ್ಣಯಿಸಿರುವಾಗ, ಅರ್ಜಿದಾರನು ಯಾವುದಾದರೂ ಬಾಹ್ಯ ಅಥವಾ ವಿಶೇಷ ಕಾರಣದಿಂದ ಈ ನ್ಯಾಯಾಲಯಕ್ಕೆ ಬಂದಿದ್ದಾನೆಯೇ ಎಂಬುದನ್ನು ಈಗ ನೋಡೋಣ.

27. ಈಗ, ಈ ಮೊಕದ್ದಮೆಯ ವಾಸ್ತವ ಸಂಗತಿಯ ಸರಣಿಯ ಕಡೆಗೆ ಗಮನಹರಿಸಿದರೆ, ಇದು ಆರೋಪ ಪಟ್ಟಿಯ ದಾಖಲೆಗಳಿಂದ ಕಂಡುಬರುವಂತೆ

ಪ್ರಾಸಿಕ್ಯೂಷನ್ ಮೊಕದ್ದಮೆಯಾಗಿದ್ದು, ಶ್ರೀಮತಿ ವಿಜಯಲಕ್ಷ್ಮಿ ಎಂಬ ಮಹಿಳೆಯು ದೂರನ್ನು ದಾಖಲಿಸಿದ್ದು, ಅದರ ಸಂಗತಿಗಳು ಈ ಮುಂದಿನಂತಿವೆ: ಆಕೆಯು ವೆಂಕಟೇಶ್ವರ ರಾವ್ ಎಂಬುವವರೊಂದಿಗೆ ವಿವಾಹವಾಗಿದ್ದು, ಅವರು, 4ನೇ ಅಡ್ಡರಸ್ತೆ, ಗಾಂಧಿಪುರಂ, ವೈಟ್‌ಫೀಲ್ಡ್, ಬೆಂಗಳೂರು ನಗರ – ಇಲ್ಲಿ ವಾಸವಾಗಿದ್ದರು. ಅವರಿಗೆ ಇಬ್ಬರು ಮಕ್ಕಳಿದ್ದರು. ಎ1–ರವಿಚಂದ್ರ ಆಗಾಗ ದೂರುದಾರರ ಮನೆಗೆ ಭೇಟಿ ನೀಡುತ್ತಿದ್ದು, ಆಕೆಯೊಂದಿಗೆ ಹಾಗೂ ಆಕೆಯು ಪತಿಯೊಂದಿಗೆ ಮಾತನಾಡುತ್ತಿದ್ದ ಮತ್ತು ಆಕೆಯ ಪತಿಯೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದು, ಆತನು ಬಾಧಿತ ಮಹಿಳೆಯೊಂದಿಗೂ ಕೂಡ ಅತ್ಯಂತ ನಿಕಟವಾಗಿರಲು ಪ್ರಯತ್ನಿಸುತ್ತಿದ್ದ. ಮೊದಮೊದಲು ಆಕೆಗೆ ಅಂಥ ಮನಸ್ಸಿಲ್ಲದಿದ್ದರೂ, ಬರಬರುತ್ತಾ ಅವರು ಪರಸ್ಪರ ತುಂಬಾ ಹತ್ತಿರವಾದಂತೆ ಕಂಡು ಬರುತ್ತದೆ. ಈ ಅನೈತಿಕ ಸಾಮೀಪ್ಯವು ಆಕೆಯ ಪತಿಯ ಗಮನಕ್ಕೆ ಬಂದು, ಆತನು ಆಕೆಯೊಂದಿಗೆ ಜಗಳವಾಡಿದ ಮತ್ತು ಆಕೆಯನ್ನು ಮನೆಯಿಂದ ಹೊರಹಾಕಿದ. ತದನಂತರ, ಈ ದೂರುದಾರಳು ತನ್ನ ಪತಿಯ ವರ್ತನೆಯ ಬಗ್ಗೆ ಎ1– ರವಿಚಂದ್ರನಿಗೆ ವಿಷಯ ತಿಳಿಸಿದಳು, ಆಗ ಎ–1, ದಕ್ಷಿಣ ಕನ್ನಡದ ಉಜಿರೆಗೆ ಬರುವಂತೆ ಆಕೆಯನ್ನು ಕೋರಿದ, ತದನುಸಾರವಾಗಿ ಆಕೆಯು 27.10.2015ರಂದು ಉಜಿರೆಗೆ ಹೋದಳು. ಆಕೆಯು ಎ1–ಮನೆಗೆ ಹೋದಾಗ, ಅಲ್ಲಿ ಎ2 ಮತ್ತು ಎ3 (ಅರ್ಜಿದಾರರು) ಇದ್ದು, ಆಕೆಯು ಅವರನ್ನು ಎ1 – ಬಗ್ಗೆ ವಿಚಾರಿಸಿದಳು. ಆಗ ಅವರು ಎ1 – ಬಗ್ಗೆ ವಿಚಾರಿಸಿದರೆ ಆಕೆಯು ಕೊಲೆಯಾಗುವ ಘೋರ ಪರಿಣಾಮವನ್ನು ಎದುರಿಸಬೇಕಾಗುತ್ತದೆಂದು ಬೆದರಿಕೆ ಹಾಕಿದರು. ವಾಸ್ತವವಾಗಿ, ಆಕೆ ಉಜಿರೆಯ ಲಾಡ್ಜ್ ಒಂದಕ್ಕೆ ಹೋಗಿ ತಂಗಿದ್ದಳು. ಅಲ್ಲಿಗೆ ಎ1 ಬಂದು 29.10.2015ರ ವರೆಗೆ ಆಕೆಯನ್ನು ಅದೇ ಲಾಡ್ಜ್‌ನಲ್ಲಿ ಇಟ್ಟುಕೊಂಡಿದ್ದ ಮತ್ತು ಅವರು ಪರಸ್ಪರ ಲೈಂಗಿಕ ಕ್ರಿಯೆಯನ್ನು ನಡೆಸಿದ್ದರು, ಆ ನಂತರ ಎ1 ಆಕೆಯನ್ನು ವಿವಾಹವಾಗಲು ನಿರಾಕರಿಸಿದ್ದು, ಎ1 ರಿಂದ ಎ3 ವರೆಗಿನ ಆಪಾದಿತರು ಆಕೆಯನ್ನು ಕೊಲೆ ಮಾಡುವ ಬೆದರಿಕೆಯನ್ನು ಹಾಕಿದರು, ಇತ್ಯಾದಿ.

28. ಮೊಕದ್ದಮೆಯ ಮೇಲ್ಕಂಡ ಸದರಿ ಸಂಗತಿಗಳನ್ನು ಗಮನಿಸಿದರೆ, ಪೂರ್ಣ ಪ್ರಮಾಣದ ಅಧಿವಿಚಾರಣೆಯಲ್ಲಿ ಎ1 ಮತ್ತು ಅರ್ಜಿದಾರರ ನಡತೆಯನ್ನು

ಪರಿಶೀಲಿಸಬೇಕಾಗುತ್ತದೆ. ಎ2 ಮತ್ತು ಎ3 ಆದ ಇಲ್ಲಿನ ಅರ್ಜಿದಾರರ ವಿರುದ್ಧ ಇರುವ ಆರೋಪವೆಂದರೆ, ಆಕೆಯು ಎ1 ಬಗ್ಗೆ ವಿಚಾರಿಸಿದರೆ, ಆಕೆಯು ಕೊಲೆಯಾಗುವ ಘೋರ ಪರಿಣಾಮವನ್ನು ಎದುರಿಸಬೇಕಾಗುತ್ತದೆಂದು ಅವರು ಆಕೆಗೆ ಬೆದರಿಕೆ ಹಾಕಿದ್ದು ಮತ್ತು ಆಕೆಯು ಅವರು ಜೀವನದಿಂದ ದೂರಾಗಲು ಒಳಸಂಚು ನಡೆಸಿದ್ದರು ಎಂಬುದು ಈ ಸಂಗತಿಯ ಒಳಾಂಶಗಳು ಪೂರ್ಣ ಪ್ರಮಾಣದ ಅಧಿವಿಚಾರಣೆಯ ಸಂದರ್ಭದಲ್ಲಿ ಸುಸ್ಥಾಪಿತವಾಗಬೇಕಾಗುತ್ತದೆ. ಎ1 ಈಗಾಗಲೇ ದಿನಾಂಕ 7.06.2016ರ ಆದೇಶಾನುಸಾರ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾನೆ.

29. ಎ1 ವಿರುದ್ಧದ ಪ್ರಧಾನ ಆರೋಪವೇನೆಂದರೆ, ಆತನು ಆಕೆಯನ್ನು ಕೊಲೆ ಮಾಡಲು ಪ್ರಯತ್ನಪಟ್ಟ, ಇತ್ಯಾದಿಯಾಗಿದೆ. ಆದರೆ, 2 ಮತ್ತು 3ನೇ ಆರೋಪಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಅವರ ವಿರುದ್ಧ ಅಂಥ ಆರೋಪಗಳನ್ನು ಮಾಡಿಲ್ಲ. ಮೇಲ್ಕಂಡ ಸದರಿ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಪ್ರಸ್ತುತ ಅರ್ಜಿದಾರರಿಗೆ ಜಾಮೀನನ್ನು ನಿರಾಕರಿಸಲು ನನಗೆ ಯಾವುದೇ ಪ್ರಬಲವಾದ ಕಾರಣಗಳು ಕಂಡು ಬರುತ್ತಿಲ್ಲ. ಈ ಹಿನ್ನೆಲೆಯಲ್ಲಿ ಕೆಲವು ಷರತ್ತುಗಳ ಮೇಲೆ ಜಾಮೀನಿನ ಮೂಲಕ ಅರ್ಜಿದಾರರು ಬಿಡುಗಡೆ ಮಾಡುವುದಕ್ಕೆ ಹಕ್ಕುಳ್ಳವರಾಗಿದ್ದಾರೆ.

30. ಈ ಅರ್ಜಿಯನ್ನು ಬಹಳ ಹಿಂದೆಯೇ ಸಲ್ಲಿಸಲಾಗಿದೆ. ಎ1 ಈಗಾಗಲೇ ಜಾಮೀನಿನ ಮೇಲೆ ಬಿಡುಗಡೆ ಹೊಂದಿದ್ದಾನೆ. ಅರ್ಜಿದಾರರನ್ನು ಸೆಷನ್ಸ್ ನ್ಯಾಯಾಲಯಕ್ಕೆ ವರ್ಗಾಯಿಸಿದರೆ ಅವರಿಗೆ ಆರ್ಥಿಕ ಹೊರೆಯನ್ನು ಹೊರಿಸಿದಂತಾಗುತ್ತದೆ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಸಮಯದ ವ್ಯರ್ಥವೂ ಆಗುತ್ತದೆ. ಹಾಗಾಗಿ ಈ ಅಂಶಗಳನ್ನೇ ವಿಶೇಷ ಕಾರಣಗಳೆಂದು ಪರಿಗಣಿಸಿ, ಅರ್ಜಿಯನ್ನು ಪುರಸ್ಕರಿಸಲು ಹಾಗೂ ಅದಕ್ಕೆ ಅವಕಾಶ ನೀಡಲು ಇಚ್ಛಿಸುತ್ತೇನೆ.

31. ಮೇಲೆ ಗಮನಿಸಿದಂತೆ ಮೇಲ್ಕಂಡ ಸದರಿ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ, ಅರ್ಜಿದಾರರು ಜಾಮೀನಿನ ಮೇಲೆ ಬಿಡುಗಡೆಯಾಗಲು ಹಕ್ಕುಳ್ಳವರಾಗಿದ್ದಾರೆಂಬುದು ನನ್ನ ಅಭಿಪ್ರಾಯವಾಗಿದೆ.

32. ತದನುಸಾರವಾಗಿ ಅರ್ಜಿಯನ್ನು ಪುರಸ್ಕರಿಸಲಾಗಿದೆ. ತತ್ಪರಿಣಾಮವಾಗಿ, ಅರ್ಜಿದಾರರನ್ನು ಭಾರತ ದಂಡ ಸಂಹಿತೆಯ 307, 376, 120-ಬಿ, 420 ಮತ್ತು 506ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ ವೈಟ್‌ಫೀಲ್ಡ್ ಪೊಲೀಸ್ ಠಾಣೆಯ ಕ್ರೈಂ ಸಂ.302/2015ಕ್ಕೆ ಸಂಬಂಧಿಸಿದಂತೆ ಬಂಧಿಸಿರುವ ಸಂದರ್ಭದಲ್ಲಿ, ಅವರನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಜಾಮೀನಿನ ಮೇಲೆ ಬಿಡುಗಡೆಗೊಳಿಸತಕ್ಕದ್ದು:

(1) ಅರ್ಜಿದಾರರು ಈ ಆದೇಶದ ಪ್ರತಿಯು ತಲುಪಿದ ದಿನಾಂಕದಿಂದ ಒಂದು ವಾರದೊಳಗೆ ತನಿಖಾಧಿಕಾರಿಯ ಮುಂದೆ ಆಗಲಿ ಅಥವಾ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯದ ಮುಂದೆ ಆಗಲಿ ತಾವೇ ಖುದ್ದಾಗಿ ಹಾಜರಾಗತಕ್ಕದ್ದು ಮತ್ತು ಸಂದರ್ಭಾನುಸಾರ ಅಧಿಕಾರವ್ಯಾಪ್ತಿಯುಳ್ಳ ನ್ಯಾಯಾಲಯಕ್ಕೆ ಅಥವಾ ತನಿಖಾಧಿಕಾರಿಗೆ ಸಮಾಧಾನಕರವಾಗುವಂಥ ಮೊತ್ತಕ್ಕೆ ಧನಾನುಕೂಲತೆಯುಳ್ಳ ಒಬ್ಬ ಜಾಮೀನುದಾರನೊಂದಿಗೆ 50,000/- ರೂ.ಗಳ ಮೊತ್ತದ ತಮ್ಮ ವೈಯಕ್ತಿಕ ಬಾಂಡನ್ನು ಬರೆದುಕೊಡತಕ್ಕದ್ದು.

(2) ಅರ್ಜಿದಾರರು ಪ್ರಾಸಿಕ್ಯೂಷನ್ ಸಾಕ್ಷಿದಾರರನ್ನು ದಿಕ್ಕು ತಪ್ಪಿಸುವ ಕಾರ್ಯದಲ್ಲಿ ತೊಡಗತಕ್ಕದ್ದಲ್ಲ.

(3) ಹೆಚ್ಚಿನ ತನಿಖೆ, ವಿಚಾರಣೆ ಇತ್ಯಾದಿಗೆ ಅಗತ್ಯವಿರುವಾಗೆಲ್ಲಾ ಅರ್ಜಿದಾರರು ತನಿಖಾಧಿಕಾರಿಯ ಮುಂದೆ ಹಾಜರಾಗತಕ್ಕದ್ದು.

(4) ಯಾವುದೇ ಅರ್ಹ ಕಾರಣಗಳಿಗಾಗಿ ನ್ಯಾಯಾಲಯದಿಂದ ವಿನಾಯಿತಿ ನೀಡಿರುವ ಹೊರತು ಎಲ್ಲಾ ಹಿಯರಿಂಗ್ ದಿನಾಂಕಗಳಂದು ಅರ್ಜಿದಾರರು ನಿಯತವಾಗಿ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು.